# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ತ್ರಿಪುರ ಮಥನ

## (ತ್ರಿಪುರ ಸಂಹಾರ)


ಕವಿ

## ವಿದ್ವಾನ್ ಡಿ. ವಿ. ಹೊಳ್ಳ



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಭಾಗವತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಕುಂದಾಪುರ ಪ್ರೆಸ್ ಮೂಲಕ ಪ್ರಕಟಿತ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೧೭

**ಪಾತ್ರಗಳು:**

ದೇವೇಂದ್ರ, ಬ್ರಹ್ಮ, ಈಶ್ವರ, ಪಾರ್ವತಿ, ಷಣ್ಮುಖ, ವಿಶ್ವಕರ್ಮ, ತ್ರಿಪುರರು (ತಾರಕಾಕ್ಷ, ಕಮಲಲೋಚನ, ವಿದ್ಯುನ್ಮಾಲಿ), ಹರಿ (ತಾರಕಾಕ್ಷನ ಮಗ), ಶಿಂಶುಮಾರ, ಮಯ, ವಿಷ್ಣು, ಅಗ್ನಿ, ವೀರಭದ್ರ, ನಂದೀಶ್ವರ, ಸುರರು.

**ಕಥಾಸಾರಾಂಶ:**

ತಾರಕಾಸುರನ ವಧೆಯ ನಂತರ ದೇವತೆಗಳು ನಮ್ಮನ್ನು ಮರೆತಿದ್ದಾರೆಂದು ಹರನ ಶಂಕೆ. ಅದಕ್ಕೆ ಸುರರನ್ನು ಪರೀಕ್ಷಿಸಲು ಮುಂದಾಗುತ್ತಾನೆ. ಆಕಾಶದಲ್ಲಿ ಕಂಡ ಯಕ್ಷಾಕಾರದ ಬಗ್ಗೆ ದೇವೆಂದ್ರನ ಕುತೂಹಲ. ಅದನ್ನ ಪರೀಕ್ಷಿಸಲು ಅಗ್ನಿ ಮತ್ತು ವಾಯು ಹೋಗಿ ಸೋತು ಹಿಂದಿರುಗುತ್ತಾರೆ. ಇಂದ್ರನು ಸಹ ಭಯಗೊಳ್ಳುವನು. ತಾರಕಾಸುರನ ಮಕ್ಕಳಿಂದ (ತಾರಾಕ್ಷ, ತಾಮ್ರಾಕ್ಷ, ವಿದ್ಯುನ್ಮಾಲಿ) ಅಮೃತವನ್ನು ಕದಿಯಲು ಚಂದ್ರನ ಮೇಲೆ ದಾಳಿ. ಚಂದ್ರನಿಗೆ ಸೋಲು. ನಂತರ ಸ್ವರ್ಗಕ್ಕೆ ದಾಳಿ ಮಾಡುತ್ತಾರೆ. ಶಚಿದೇವಿಯನ್ನು ಒಪ್ಪಿಸಲು ಇಂದ್ರನಿಗೆ ತಿಳಿಸುತ್ತಾರೆ. ನಂತರ ಶಚಿಯು ತಾರಾಕ್ಷನ ಬಳಿಗೆ ತೆರಳುವಳು. ಕಾತ್ಯಾಯಿನಿ ವ್ರತದ ನಂತರ ನಿನ್ನನ್ನು ಕೂಡುತ್ತೇನೆ ಎಂದು ತಪ್ಪಿಸಿಕೊಳ್ಳುತ್ತಾಳೆ. ಇತ್ತ ತಾಮ್ರಾಕ್ಷನ ದಿಗ್ವಿಜಯ. ಯಜ್ಞವನ್ನು ಕೆಡಿಸಿ ಋಷಿಗಳನ್ನು ಹಿಂಸಿಸುತ್ತಾನೆ. ಇತ್ತ ಅವನ ಸಹೋದರನಾದ ವಿದ್ಯುನ್ಮಾಲಿಯು ಕೂಡ ಪಾತಾಳದ ಮೇಲೆ ದಾಳಿಯನ್ನು ಮಾಡಿ, ನಾಗರಾಜನನ್ನು ಸೋಲಿಸುತ್ತಾನೆ. ತಾರಕಾಸುರನ ಮಕ್ಕಳ ದಾಳಿಯಿಂದ ಎಲ್ಲರೂ ಚಿಂತೆಗೆ ಒಳಗಾಗುತ್ತಾರೆ. ಇಂದ್ರನು ಈಶ್ವರನ ಮೊರೆ ಹೋಗುತ್ತಾನೆ. ಪರಮೇಶ್ವರ ಇಂದ್ರನಿಗೆ ಅಭಯವನ್ನು ಕೊಡುತ್ತಾನೆ. ತ್ರಿಪುರಾಸುರನೊಡನೆ ಶಿವನು ಯುದ್ಧವನ್ನು ಮಾಡಿ ಅವರನ್ನು ಕೊಲ್ಲುತ್ತಾನೆ. ಆದ್ದರಿಂದ ಶಿವನು ತ್ರಿಪುರಾರಿ ಎಂಬ ಬಿರುದು ಪಡೆಯುತ್ತಾನೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ವಿದ್ವಾನ್ ಡಿ. ವಿಷ್ಣು ಹೊಳ್ಳರು (ಕ್ರಿ. ಶ. ೧೯೦೫ – ೧೯೭೦) ಕುಂದಾಪುರದಲ್ಲಿ ಅಧ್ಯಾಪಕರಾಗಿದ್ದರು. ತೆಂಕುತಿಟ್ಟಿನ ಪ್ರಖ್ಯಾತ ಭಾಗವತರಾಗಿದ್ದ ಪುತ್ತಿಗೆ ರಾಮಕೃಷ್ಣ ಜೋಯಿಸರ ಸಹೋದರರಿವರು. ಪ್ರಸಂಗಗಳನ್ನಲ್ಲದೇ, ತದ್ಭವಸಂಸ್ಕೃತಕೋಶ, ಸಂಜ್ಞಾರ್ಥ ತತ್ತ್ವಕೋಶ, ಕೀರ್ತನ ತರಂಗ, ಶ್ರೀದೇವೀಭಕ್ತಿಸಾರ, ಶ್ರೀಗಣೇಶಭಕ್ತಿಸಾರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಸ್ವತಃ ಪ್ರಕಾಶಕರಾಗಿ ಅನೇಕ ಪುಸ್ತಕಗಳನ್ನು ಪ್ರಕಾಶಿಸಿದ್ದಾರೆ.

ಇವರು ರಚಿಸಿದ ಪ್ರಸಂಗಗಳು: ಅಕ್ಷಯಾಂಬರ ವಿಲಾಸ (ದ್ರೌಪದೀ ವಸ್ತ್ರಾಪಹಾರ), ಅಂಶುಮತಿ ಕಲ್ಯಾಣ (ಪ್ರದೋಷ ಮಹಾತ್ಮೆ), ಅಶೋಕಸುಂದರಿ ಪರಿಣಯ, ಕಲ್ಕುಡ ಪ್ರತಾಪ, ಕುಂಭಾಶಿ ಕ್ಷೇತ್ರ ಮಹಾತ್ಮೆ, ಕುವಲಯಾಶ್ವ ವಿಜಯ (ಮದಾಲಸಾ ಪರಿಣಯ), ಕೌಸಲ್ಯಾಪರಿಣಯ, ಗಣೇಶಮಹಾತ್ಮೆ, ತುಳಸೀಪರಿಣಯ, ತುಳುನಾಡ ಸಿರಿದೇವಿ (ತುಳುನಾಡ ಸಿರಿ ಮಹಾತ್ಮೆ), ತ್ರಿಪುರಮಥನ (ತ್ರಿಪುರ ಸಂಹಾರ), ದಾನವೀರಕರ್ಣ, ದೇವಪೂಂಜಪ್ರತಾಪ, ಪಾಂಡವರಾಜ್ಯವಿಯೋಗ, ಭೀಮಸೇನಪ್ರತಾಪ, ಮಧುಪುರ ಮಹಾತ್ಮೆ (ಜಯಸಿಂಹೋಪಖ್ಯಾನ ಸಹಿತ), ರಾಮರಾಜ್ಯ, ವೃತ್ರಾಸುರಕಾಳಗ, ಶಲ್ಯಪ್ರತಾಪ, ಶ್ರೀಕೃಷ್ಣವಿಜಯ, ಶ್ರೀದೇವೀಮಹಾತ್ಮೆ, ಶ್ರೀವಿಷ್ಣುಲೀಲೆ (ದಶಾವತಾರ), ಸೀಮಂತಿನೀ ಪರಿಣಯ (ಸೋಮವಾರವ್ರತ ಮಹಾತ್ಮೆ), ವಿಧಿಲೀಲೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಕಂಠಂ ಪ್ರಮಥಾದಿನಾಥನಗಜಾಧೀಶಂ ಗಿರೀಶಂ ಸುರಾ |
ನೀಕಸ್ತೋತ್ರ ಪವಿತ್ರಗಾತ್ರನಮಲಜ್ಞಾನ ಪ್ರಕೋಶಂ ಪ್ರಶಾಂ |
ತಾಕಾರಂ ಶಶಿಶೇಖರಂ ಸ್ಮರಹರಂ ಗಂಗಾಧರಂ ಶಂಕರಂ |
ಲೋಕಾಧ್ಯಕ್ಷ ಮಹೇಶನೀಗೆ ಸುಖಸಂಶ್ರೇಯಂಗಳಂ ಸರ್ವದಾ || 1 ||

**ನಾಟಿ - ರೂಪಕ**
ಜಯತು ಜಯತು ಗಣನಾಯಕ |
ಜಯತು ಜಯ ಗತಿಮತಿದಾಯಕ |
ಜಯಜಯ ವಿಘ್ನೇಶ್ವರ ಭವ |
ಭಯ ತಾರಕ ಬೆನಕ || ಜಯಜಯ ಮಾಂ ಪಾಹಿ || ಪಲ್ಲವಿ||
ಮಂಗಲಗಾತ್ರನೆ ಕರುಣಾ |
ಪಾಂಗನೆ ನಾಗಾಭರಣಾ |
ಸಂಗೀತಪ್ರಿಯ ಸಜ್ಜನ | ಸಂಗನೆ ಗಜವದನ ||
ಮಂಗಲಚರಿತನೆ ಸರ್ವ |
ಮಂಗಲೆಯಣುಗನೆ ಸುಖದ |
ಮಂಗಲಮಿತಿಯಿತ್ತೆಮ್ಮನು | ಹಿಂಗದೆ ಪೊರೆ ದೇವ | ಜಯ || 2 ||

ಪ್ರತಿದಿನ ಶುಭ ಕಾರ್ಯಗಳಲಿ |
ಪ್ರಥಮಾರಾಧನೆಗೊಂಬಾ |
ಕ್ಷಿತಿಜನರಿತ್ತಾ ಭಕ್ಷ್ಯಾ | ದಿಗಳನು ಸವಿದುಂಬಾ ||
ಶಿತಿಕಂಠನ ಪುತ್ರನೆ ಸುರ |
ನುತಿ ಪಾತ್ರನೆ  ಸುಪವಿತ್ರನೆ |
ಸತತಂ ಪ್ರಾರ್ಥಿಪೆನೆನ್ನೀ | ಕೃತಿ ಬೆಳಗಿಸೊ ದೇವಾ | ಜಯಜಯ || 3 ||

**ಭಾಮಿನಿ**
ಶ್ರೀವರನ ನೆನೆದಜಭವಾದ್ಯರ |
ಪಾವನಾಂಘ್ರಿಯ ಸ್ಮರಿಸಿ ರವಿಶಶಿ |
ಜೀವ ಭೌಮಾದಿಗ್ರಹರ ದಿಕ್ಪಾಲಕರ ಸ್ತುತಿಸಿ ||
ದೇವಿ ಮೂಕಾಂಬಿಕೆಯ ಲಕ್ಷ್ಮೀ |
ದೇವಿಯಡಿಗಳ ಭಾವಿಸುತ ವಾ |
ಗ್ದೇವಿಯರುಹಿದ ಬಗೆಯೊಳೊರೆಯುವೆನೀ ಮಹಾ ಕಥೆಯ || 4 ||

**ಸೌರಾಷ್ಟ್ರ - ತ್ರಿವುಡೆ**
ಸೂತನಾ ಸತ್ರದಲಿ ಮುನಿವರ |
ರೋತು ಕೇಳುವ ತೆರದೊಳಾಪು |
ಣ್ಯಾತುಮರ ಚರಿತೆಗಳನರುಹಿದ | ನಾತೆರದೊಳು  || 5 ||

ತ್ರಿಪುರ  ದಹನವದೆಂತೆನಲು ಕೇಳ್ |
ಕುಪಿತ ಷಣ್ಮುಖನಿಂದ ತಾರಕ |
ಚಪಳ ರಾಕ್ಷಸರೊಡನೆ ಮಡಿದನು ಕುಪಥದಿಂದ || 6 ||

ಬಳಿಕಲಾತನ ಸುತರು ಮೂವರು |
ತೊಳಲಿದರು ಗಿರಿ ವನಗಳನು ಗುಹೆ |
ಗಳಲಿ ಜೀವಿಸುತಿರ್ದರೈ ಹಲ | ಕೆಲವು ಕಾಲ || 7 ||

ಮತ್ತೆ ಬ್ರಹ್ಮನ ವರವ ಪಡೆದು ಸ |
ಮಸ್ತಲೋಕವ ಗೆಲಿದು ತ್ರಿಪುರರ |
ನೆತ್ತಿ ಮೆರೆವರು ನಾಕವೇರುತ | ದೈತ್ಯರೊಡನೆ || 8 ||

ಸೋಲವಾಂತಾ ಸುರರ ಮೊರೆಯನು |
ಕೇಳಿ ತ್ರಿಪುರವನುರುಹಿದನು ಹರ |
ಮೇಲೆ ಭೂರಥವಡರಿ ವೈಷ್ಣವ | ಮೂಲ ಶರದಿ || 9 ||

ಪರಮ ಮಂಗಲ ಕಥನವಿದನಾ |
ದರಿಸಿ ಕೇಳ್ದರೆ ಸೌಖ್ಯವೆಂದಾ |
ನರುಹಿದೆನು ವರ ಯಕ್ಷಗಾನದ | ವಿರಚನೆಯಲಿ || 10 ||

ಪ್ರಾಸ ಯತಿ ಮಾತ್ರಾದಿ ಛಂದೋ |
ನ್ಯಾಸದಲಿ ವ್ಯಾಕರಣ ಪಥದಲಿ |
ದೋಷವಿರೆ ತಿದ್ದುವುದು ಕೋವಿದ | ರೋಸರಿಸದೆ || 11 ||

**ಭಾಮಿನಿ**
ಚಿತ್ರವಿಪುದೀ ಕಥೆಯನಾ ಖಳ |
ದೈತ್ಯರೊಡನಾ ತಾರಕಾಸುರ |
ಮೃತ್ಯುವಶನಾಗಲ್ಕೆ ಮಂಗಲವಾಯ್ತು ಭುವನದಲಿ ||
ಕೀರ್ತಿಸಲು ಜನನಿವಹ ಸುಖ ಸಂ |
ಪತ್ತಿನಲಿ ಮೆರೆಯಲ್ಕೆ ನಿರ್ಜರ |
ಮೊತ್ತವನು ನೋಡುತ್ತ ನುಡಿದನು ಶಕ್ರನೋಲಗದಿ || 12 ||

**ಕೇದಾರಗೌಳ - ಅಷ್ಟ**
ಕೇಳಿರಿ ಸುರರೆಲ್ಲ ತಾಳಿರಿ ಧೈರ್ಯವ |
ಭಾಳಾಕ್ಷನೊಲವಿನಿಂದ ||
ಬಾಳಿದೆವೀಸ್ವರ್ಗದೋಲಗದಲಿ ದೈತ್ಯ |
ಜಾಲದ ಭಯವಿಲ್ಲದೆ || 13 ||

ದುರುಳ ತಾರಕ ಜಲಂಧರ ದಂಭಾದಿಗಳೆಮ್ಮ |
ಪುರವನಾಕ್ರಮಿಸಲಾಗಿ ||
ಸ್ಮರಹರನವರ ಸಂಹರಿಸಿ ಕಾಯ್ದನು ಸೌಖ್ಯ |
ಕರುಣಿಸಿ ಮಮತೆಯಲಿ || 14 ||

ಭಯವಿಲ್ಲವಿನ್ನು ದುರ್ಜಯ ದಾನವರ ವಂಶ |
ಲಯವಾಯ್ತು ಶರಣರಿಗೆ ||
ಬಯಸಿದಿಷ್ಟಾರ್ಥವ ದಯೆಗಯ್ವ ಹರನಿರೆ |
ದುರುಳರ ಬಾಧೆಯುಂಟೆ || 15 ||

**ವಾರ್ಧಕ**
ಸುರರಾಜನಿಂತೆಂದ ವರವಚನಗಳ ಕೇಳಿ |
ಹರುಷದಿಂದಿರುತಿರ್ದರಮರಾವತಿಯೊಳೆಲ್ಲ |
ಗರುಡ ಗಂಧರ್ವ ಕಿನ್ನರ ಯಕ್ಷ ಮೊದಲಾದ ದೇವಗಣವತಿವಿಭವದಿ ||
ಒರೆಯಲೇನಿತ್ತ ದಾನವರ ಕುಲವಾಧಾರ |
ವಿರದೆ ಗಿರಿಗುಹೆಗಳಲಿ ಚರಿಸುತಿರೆ ತಾರಕಾ |
ಸುರನ ಸುತರೊಂದುದಿನ ಕೂಡಿ ಯೋಚಿಸಿದರ್ಕೈ ಮುಂದೇನುಪಾಯವೆಂದು || 16 ||

**ಕಾಂಭೋದಿ - ಝಂಪೆ**
ಸೋದರರೆ ಕೇಳಿರೆಮ | ಗಾದೇನು ದಿವಿಜರಿಂ |
ದಾದ ಭಂಗವ ತಾಳಬಹುದೆ ||
ಮಾದೇವನೇ ಸುಖದೊ | ಳಾಧರಿಸುವುದ ಮರೆತು |
ಭೇದಿಸಿದನೆಮ್ಮ ಪೂರ್ವಜರ || 17 ||

ಸುರರ ಮಾತನೆ ನಂಬಿ | ತರಿದನಲ್ಲವೆ ಪಿತನ |
ಹರನಪ್ಪಣೆಯಲಿ ಷಣ್ಮುಖನು ||
ಕರೆದಿತ್ತು ಕಾಯ್ವ ಗುರು | ಹಿರಿಯರಿಲ್ಲದೆ ತಿರಿವ |
ತರಳರಂತಾಯ್ತಲ್ಲ ಹರನೇ || 18 ||

ಸೊಕ್ಕಿದರು ಸುರರು ನಾವ್ ಪಕ್ಷಬಲವಿಲ್ಲದಾ |
ಹಕ್ಕಿಗಳ ಹಾಗಿರುವುದಾಯ್ತು ||
ಹೊಕ್ಕು ಗಿರಿ ಗುಹೆಗಳಲಿ | ದುಃಖಿಸುವುದೇನು ಫಲ |
ನಕ್ಕು ನಗರೇ ಮಿಕ್ಕ ಜನರು || 19 ||

**ಸೌರಾಷ್ಟ್ರ - ತ್ರಿವುಡೆ**
ಎನಲು ಕೇಳ್ದಾ ಕಮಲಲೋಚನ |
ದನುಜರೆಮ್ಮಲಿ ಸತ್ವ ಸಾಹಸ |
ಗುಣಗಳಿರೆ ಗಿರಿಗುಹೆಯೊಳಿರುವುದು | ಘನತೆಯಲ್ಲ || 20 ||

ಹಿರಿಯರಾಗಿರೆ ನಾವು ಸ್ವರ್ಗದ |
ಸಿರಿಗೆ ಭಾಗಿಗಳಲ್ಲವೇ ಶ್ರೀ|
ವರನ ದಯೆಯಿಂ ಮೆರೆಯ ಬಿಡುವುದೆ | ಸುರರ ದಿವದಿ || 21 ||

ಇರಲಿ ಸರ್ವರು ಕೂಡಿ ತ್ರಿದಶರ |
ನೊರಸಿ ಪಡೆಯಲು ಬೇಕು ತ್ರಿದಿವವ |
ಬರುವುದೇನೈ ಜಯವು ಪೌರುಷ | ಮೆರೆಸದನಕ || 22 ||

ಸದರವಲ್ಲವು ಕಾರ್ಯ ನೋಡಲು |
ಕೆದರಿ ಕಿಚ್ಚನು ಹಾಯ್ವ ಶಲಭದ |
ಹದನವೈಸಲೆ ವಿಧಿಯ ವರಬಲ | ವೊದಗದೀಗ || 23 ||

ತ್ವರಿತದಿಂ ನಡೆದೈದಿ ಬ್ರಹ್ಮನ |
ಪರಮ ತಪದಿಂದೊಲಿಸಿ ಬಳಿಕಾ |
ವರವ ಪಡೆದರೆ ಮೂರು ಲೋಕವು | ಸರಸವೆಮಗೆ || 24 ||

ಎನಲು ವಿದ್ಯುನ್ಮಾಲಿಯಾ ಸೂ |
ಚನೆಗೆ ಸೈಸೈ ಎಂದು ಮೂವರು |
ದನುಜರೊಡನೈದಿದರು ಕಮಲಾ | ಸನನ ನೆನೆದು || 25 ||

**ಭಾಮಿನಿ**
ಶೋಧಿಸಿದರಾದೈತ್ಯರುತ್ತಮ |
ವಾದ ಸ್ಥಳವನು ವಿಪಿನ ಮಧ್ಯದೊ |
ಳಾಧರಿಸಿದರು ತಾಪಸರ ವೃತ್ತಿಯನು ಭಕ್ತಿಯಲಿ ||
ವೇದಗರ್ಭನ ಹೃದಯ ಕಮಲದೊ |
ಳಾದರಿಸಿ ತಪಗೈದರೊಂದೇ |
ಸಾಧನೆಯೊಳೀರೇಳು ಲೋಕವು ನಡುಗುವಂದದಲಿ || 26 ||

**ವಾರ್ಧಕ**
ದೃಷ್ಟಿಗಳನಿಟ್ಟು ನಾಸಾಗ್ರದೊಳು ಚರಣದಂ |
ಗುಷ್ಠವನ್ನೂರಿ ಪಂಚಾಗ್ನಿ ಮಧ್ಯದಿ ನಿಂದು |
ಕಟ್ಟುಗ್ರತಪಗೈದರಾಹಾರಮಂ ತೊರೆದು ದೇಹಾಭಿಮಾನವುಳಿದು ||
ಸೃಷ್ಟಿಯುರಿದುದು ಕೂಡೆ ಸಪ್ತಸಾಗರ ಕುದಿದು |
ಸುಟ್ಟು ಸೀಕರಿಯಾಯ್ತು ತರುಲತಾಗುಲ್ಮಕುಲ |
ಕೆಟ್ಟೆವಾಯೆಂದು ಗೋಳಿಟ್ಟರಾ ಸುರ ನರೋರಗರೆಲ್ಲ ದೆಸೆಗಾಣದೆ || 27 ||

**ಕಂದ ಪದ್ಯ**
ತಾರಕನ ತನುಜರೀತೆರ |
ಘೋರ ತಪಶ್ಚರ್ಯೆಯಿಂದ ಬಳಲುವುದರಿತಾ ||
ವಾರಿಜಭವನೊಯ್ಯನೆ ಮೈ |
ದೋರಿದನೀಭಕ್ತಿ ಭರಕೆ ಮೆಚ್ಚಿದೆನೆನುತಂ || 28 ||

**ಕೇದಾರಗೌಳ - ಝಂಪೆ**
ಜಯತು ಜಯ ಲೋಕೇಶನೆ | ಭಾರತೀ |
ಪ್ರಿಯನೆ ಹಂಸಾರೂಢನೆ ||
ಭಯದಿ ಮರೆಹೊಕ್ಕ ಕುಲವ | ವರವಿತ್ತು |
ದಯೆಯಿಂದ ಕಾಯ್ವ ದೇವ || 29 ||

ಎಂದು ಜಯಜಯವೆನ್ನುತ | ಭಯಭಕ್ತಿ |
ಯಿಂದ ತಪಬಿಟ್ಟೇಳುತ ||
ವಂದಿಸಲು ದನುಜರಾಗ | ಕಮಲಭವ |
ನೆಂದ ಪ್ರೀತಿಯೊಳು ಬೇಗ || 30 ||

ಮೆಚ್ಚಿದೆನು ನಿಮ್ಮ ತಪಕೆ | ಮೂಲೋಕ |
ಬೆಚ್ಚಿ ಬೆರಗಾದ ಭರಕೆ ||
ಇಚ್ಛೆಯೇನುಂಟು ನಿಮಗೆ | ಕೇಳಿರೆನ |
ಲುಚ್ಚರಿಸಿದರು ಬೊಮ್ಮಗೆ || 31 ||

**ಮಧುಮಾಧವಿ - ಏಕ**
ಹೇಮಗರ್ಭನೆ ಲಾಲಿಸೆಮ್ಮಯ ಮಾತ |
ಕ್ಷೇಮಧಾಮನೆ ಸರ್ವ ಲೋಕವಿಧಾತ ||
ಪ್ರೇಮದೊಳಸುರರ ಕಾಯ್ವ ಕೃಪಾಳು |
ಸ್ವಾಮಿ ನಿನ್ನನು ಹೊರತಿಲ್ಲ ಲೋಕದೊಳು || 32 ||

ಹಿಂದೆ ನಮ್ಮಯ್ಯ ನೀವಿತ್ತಿಹ ವರದಿ |
ಹೊಂದಿದ ಕೀರ್ತಿಯನೀ ಮೂರು ಜಗದಿ ||
ನಿಂದು ಷಣ್ಮುಖಗಿದಿರಾಗಿಯೆ ಕಾದಿ |
ಸಂದನು ಗತಿಯಿಲ್ಲದಾದೆವೀ ತೆರದಿ || 33 ||

ಆದುದಾಗಲಿ ಬಂದ ಬವಣೆಯ ನೆನೆದು |
ಖೇದಗೊಂಡರೆ ಲಾಭ ಕ್ಷೇಮವೇನಹುದು ||
ಮೋದದಿ ಕೇಳ್ವುದು ಬೇಕಾದ ವರವ |
ಆದರದಿಂದೀವೆ ನಿಮ್ಮ ಕಾಮಿತವ || 34 ||

**ಭಾಮಿನಿ**
ಎನೆ ಚತುರ್ಮುಖನಡಿಗೆ ನಮಿಸುತ |
ವಿನಯದಿಂದರುಹಿದರು ಮೂವರು |
ಘನ ಪಥದೊಳೆಸಗುವೆವು ತ್ರಿಪುರಂಗಳನು ಬೇರಾಗಿ ||
ದನುಜ ಮನುಜಾಮರರೊಳಗ್ಗಳ |
ರೆನಿಸಿ ನಾವ್ ಸರ್ವಾಧಿಕಾರವ |
ಘನತೆಯಲಿ ನಡೆಸುವರೆ ಕರುಣಿಸಬೇಕು ವರವೆನುತ || 35 ||

**ಸೌರಾಷ್ಟ್ರ - ತ್ರಿವುಡೆ**
ದನುಜರೆಂದುದ ಕೇಳಿ ಕಮಲಜ |
ನೆನೆದನಂದಿನ ತಾರಕನ ಬಗೆ |
ಯನಿತು ತ್ರಿಪುರರೊಳಾಯ್ತು ದೈವದ | ಘನರೆಯೆನುತ || 36 ||

ಕೇಳಿರೈ ದಾನವರು ನಿಮ್ಮಯ |
ಕೇಳಿಕೆಯು ಕೈಗೂಡಲೊಂದೇ |
ಕೀಲಿನಲಿ ಬಿಗಿದಾ ಪುರತ್ರಯ | ವಾಳಿರಯ್ಯ || 37 ||

ಪರಮ ಕಾಂಚನ ರಜತ ಲೋಹಾಂ |
ತರದ ತ್ರಿಪುರಂಗಳಲಿ ಮೆರೆದಾ |
ವರುಷ ಸಾಸಿರಕೊಮ್ಮೆ ಕೂಡುತ | ಚರಿಸಿರಯ್ಯಾ || 38 ||

ಆದರೊಂದಸ್ತ್ರದಲಿ ತ್ರಿಪುರವ |
ಭೇದ ಮಾಳ್ಪಾತನಲಿ ಯುದ್ಧವ |
ಗೈದು ಸಾಯದೆ ಬಾಳಿರೈ ಪರ | ಮಾದರದಲಿ || 39 ||

ಎಂದು ವಾಣೀರಮಣನತಿ ಭರ |
ದಿಂದ ಗಗನವನೇರಲೊಯ್ಯನೆ |
ಬಂದರೊಂದೇ ಮತದಿ ದಾನವ | ರೊಂದುಗೂಡಿ || 40 ||

**ಭಾಮಿನಿ**
ಕರೆಸಿ ಪೇಳ್ದರು ಮಯನ ಸುಕಲಾ |
ಪರಿಣತಿಯೊಳತಿ ಚೋದ್ಯವಹ ಪುರ |
ವರಗಳನು ರಚಿಸಲ್ಕೆ ಕಾಂಚನ ರಜತ ಲೋಹಗಳ ||
ನೆರಹಿದಾಗಳೆ ದೇವಶಿಲ್ಪದ |
ವಿರಚನೆಯ ಮೀರಿತ್ತು ಸೃಷ್ಟಿಗೆ |
ಹಿರಿದೆನಲು ತ್ರಿಪುರಂಗಳೆಸೆದುವು ಮಯನ ಕೈಗುಣದಿ || 41 ||

**ತೋಡಿ - ಅಷ್ಟ (ಆಯಿತು ಸೇತು ಕಟ್ಟಿ)**
ಕಂಡಿರೇ ತ್ರಿಪುರಗಳ ವಿಸ್ತಾರ |
ಕಂಡಿರೆ ಸ್ವರ್ಣಾದಿ ಲೋಹದಾಕೃತಿಗಳ | ಕಂಡಿರೆ ||ಪಲ್ಲವಿ||
ಸುರನರೋರಗರಿಗೆ ಕಾಣದಂದದಿ ಲೋಕ |
ಚರಿಸಿ ಶೋಭಿಸುವಂಥ | ಪುರಗಳಾಗಿವೆ ನೋಡಿ ||
ವರುಷ ಸಾವಿರಕೊಮ್ಮೆಗೆ | ಸಂಧಿಸಿ ಮತ್ತೆ |
ತಿರುಗಲೊಂದೇ ಕೀಲಿಯೊಳಗಿವೆ ಹೀಗೆ || 42 ||

ಹೊಳೆವ ಹೊನ್ನಿನ ದುರ್ಗವಿದೆ ತಾರಕಾಕ್ಷಗೆ |
ಬೆಳಬೆಳಗುವ ರವಿ ತೇಜದ ರಜತದ |
ಚೆಲುಕೋಟೆ ಕಮಲಾಕ್ಷಗೆ || ಕಾರ್ಗತ್ತಲೆ |
ಗಳುಕದ ಲೋಹದುರ್ಗವು ವಿದ್ಯುನ್ಮಾಲಿಗೆ || 43 ||

ಇನ್ನೇನು ಭಯವಿಲ್ಲವೀರೇಳು ಭುವನದ |
ಪೂರ್ಣಾಧಿಕಾರ ನಿಮ್ಮಾಧೀನವಿರೆ ಲೋಕ |
ಮಾನ್ಯತೆ ಪಡೆದಿರಯ್ಯ || ನಿಮ್ಮೋಲಗ |
ವನ್ನು ಓಲೈಸದೆ ಬಾಳ್ವರಾರಯ್ಯ || 44 ||

**ಕಾಂಭೋದಿ - ಝಂಪೆ**
ಇಂತು ಮಯನೆಂದ ವಚ | ನಾಂತರವನರಿತು ಬಲ |
ವಂತರಹ ತಾರಕಾತ್ಮಜರು ||
ನಿಂತು ನೋಡಿದರು ತ | ಮ್ಮಂತರಂಗದಿ ಹಿಗ್ಗಿ |
ಇಂತ ಕೃತಿಗಂತ್ಯವಿಲ್ಲೆನುತ || 45 ||

ಬಂದುದಾಗಳೆ ಹಿರಿಯ | ಬಂಧು ಬಾಂಧವ ಬಳಗ |
ಹಿಂದೆ ತಾರಕನಳಿದ ಮೇಲೆ ||
ಸಂದುಗೊಂದಿನಲಿ ಮೈ | ಗುಂದಿ ಬಡವಾದಸುರ |
ವೃಂದವೈತಂದುದೇನೆಂಬೆ || 46 ||

ಹರುಷದಿಂ ಸಾಲಾಗಿ | ಬರುವ ದನುಜರ ನೋಡಿ |
ವರ ತಾರಕಾಕ್ಷನಿದಿರೆದ್ದು ||
ಕರೆದು ಸತ್ಕರಿಸಿದನು | ಪರಿಣಾಮ ಲೇಸು ಭಲೆ |
ಗುರುಹಿರಿಯರಾಗಮನದಿಂದ || 47 ||

ತಡವೇತಕಿನ್ನು ಸುರ | ಗಡಣವನು ಹೊಡೆದಿಕ್ಕಿ |
ಹಿಡಿದು ಸುರಪಟ್ಟವೇರುವರೆ ||
ದಡಿಗರವರೀ ಕುಲಕೆ | ಕೊಡಲಿಯಾದರು ಹಿರಿಯ |
ರೊಡೆತನವ ಕಿತ್ತೊಗೆದರಲ್ತೆ || 48 ||

ಎನಲು ಸರಿಸರಿಯೆಂದು | ದನುಜ ಸಂತತಿಯೆದ್ದು |
ವನಧಿಘೋಷದಲಿ ಬೊಬ್ಬಿರಿದು ||
ಅನಿಮಿಷರ ಪುರವನೀ | ಕ್ಷಣವೆ ಮುತ್ತುವ ಬನ್ನಿ |
ರೆನುತ ಸನ್ನಹವಾದರೆಲ್ಲ || 49 ||

**ಮಾರವಿ - ಏಕ**
ಭರದಿಂ ತ್ರಿಪುರಾ | ಸುರರಾ ದೈತ್ಯರ |
ನೆರವಿಯನೊಡಗೂಡಿ ||
ಧರೆಯೊಳಗಿಹ ನೃಪ | ವರರ ಸಮೂಹವ |
ಪರಿಭವಗೊಳಿಸಿದರು || 50 ||

ಆಗಳೆ ಹೊಕ್ಕರು | ನಾಗರ ಲೋಕವ |
ನಾಗಾಂತಕನಂತೆ ||
ಮೇಗೆರಗುವ ಶಿರ | ಬಾಗಿಸಿ ನಡೆದರು |
ತಾಗಿದ ಪನ್ನಗರ || 51 ||

ಮತ್ತೆ ಗರುಡಗತಿ | ವೆತ್ತಾಕಾಶವ |
ಹತ್ತಿಹರೆದೆಗೆಡದೆ ||
ಸುತ್ತಿ ಸುಳಿದು ಬೆರ | ಳೆತ್ತಿದ ತ್ರಿದಶರ |
ಮೊತ್ತವನಟ್ಟಿದರು || 52 ||

**ಕಂದ ಪದ್ಯ**
ತಡೆಯಲಾಕ್ಕರದೆ ತ್ರಿಪುರರ |
ಕಡು ಹಾವಳಿಯಂ ಸುರೇಂದ್ರನಡಿಯೊಳ್ ಭರದಿಂ ||
ನುಡಿದರು ಸುಮನಸರೀತೆರ |
ನಡನಡಗುತ ನಾಕವೇರಿದಸುರರ ಭಯದಿಂ || 53 ||

**ಸಾರಂಗ - ಅಷ್ಟ**
ಲಾಲಿಸಿ ಕೇಳು ಜೀಯ | ಈ ಕ್ಷಣ ಯುದ್ಧ |
ಕೇಳಯ್ಯ ಸುರರೊಡೆಯ ||
ಬಾಳಲರಿದು ನಮ್ಮ | ಆಲಯದಲಿ ದೈತ್ಯ |
ಜಾಲವೈತಂದೀಗ | ಗೋಳುಗುಟ್ಟಿಸುತಿದೆ || 54 ||

ತಾರಕನಳಿದ ಮೇಲೆ | ದೈತ್ಯರ ಬಾಧೆ |
ತೀರಿತೆಂದಿರ್ದೆವಲ್ಲೆ ||
ಮೂರುಲೋಕವನೆಲ್ಲ | ಗಾರುಗೆಡಿಸಿ ಸ್ವರ್ಗ |
ವೇರಿದ ತ್ರಿಪುರರ | ಹೋರಟೆ ಹೆಚ್ಚಾಯ್ತು || 55 ||

ಪರಮೇಷ್ಠಿಯಿಂ ವರವ | ಪಡೆದು ಮೂರು |
ಪುರ ಕಟ್ಟಿಹರು ವಾಸವ ||
ಧುರಕೆ ಹಿಮ್ಮೆಟ್ಟುವ | ಬರಡು ರಾಕ್ಷಸರಲ್ಲ |
ಪರಮೇಶ್ವರನೆ ಬಲ್ಲ | ನಿರಿದು ಜೈಸುವರೆ || 56 ||

**ಭೈರವಿ - ಅಷ್ಟ**
ಸುರರೆಂದ ನುಡಿಯ ಕೇಳಿ | ಮಹೇಂದ್ರ ತಾ |
ನುರಿದೆದ್ದ ಕಿಡಿಯುಗುಳಿ ||
ಅರರೆ ಕೀಟಗಳಂತೆ ಉರಿದು ಹೋಗುವ ಜಾತಿ |
ಬೆರಸಿ ಬಂದುದೆಯೆನುತ || 57 ||

ಬರಲಿ ದೈತ್ಯರು ಧುರಕೆ | ನಮ್ಮೊಡೆಯಿಂದ |
ಮರಳುವುದುಂಟೇ ಜೋಕೆ ||
ಸುರ ಸೇನಾಂಬುಧಿಯನು | ತ್ವರಿಸಿ ದಿಕ್ಪಾಲರ |
ನಿರಿದು ಹೋಹರೆ ಖಳರು || 58 ||

ನಡೆಯಲಿ ಸೇನೆ ಮುಂದೆ | ಪಾವಕ ಮುಖ್ಯ |
ರೊಡನೈದಿ ಬರಲಿ ಹಿಂದೆ ||
ದಡಿಗರೆಲ್ಲರ ಸೊಕ್ಕ | ಹೊಡೆದಿಕ್ಕಿ ಮಾರಿಗೆ |
ಬಡಿಸಿ ಹೊಯ್ಸುವ ಭೇರಿಯ || 59 ||

**ಭೈರವಿ - ಏಕ**
ಸುತ್ರಾಮನ ನುಡಿ ಕೇಳಿ | ಸ |
ರ್ವತ್ರ ಸುರರು ಭರ ತಾಳಿ ||
ಶಸ್ತ್ರಾಸ್ತ್ರಗಳನು ಧರಿಸಿ | ಮುಂ |
ದೊತ್ತಿದರಸುರರ ಬೆರಸಿ || 60 ||

ಹೂಂಕಾರದಿ ಮಾರಾಂತ | ಖಲ |
ಸಂಕುಲವನು ಝಂಕಿಸುತ ||
ನೂಂಕಿದರಂತಕನೆಡೆಗೆ | ಬಲು |
ಬಿಂಕದ ದೈತ್ಯರ ಹಾಗೆ || 61 ||

ದೈತ್ಯಾಮರರೀ ತೆರದಿ | ಕಾ |
ದುತ್ತಿರೆ ಸಮಸಾಹಸದಿ ||
ಧೂರ್ತ ಕಮಲಲೋಚನನಾ | ಕಾ |
ಣುತ್ತೆಂದನು ಬಲಮಥನ || 62 ||

**ಘಂಟಾರವ - ಅಷ್ಟ**
ಸರಿವುದೆಲ್ಲಿಗೆ ನಿಲ್ಲು ರಾಕ್ಷಸ ನಮ್ಮ |
ಪುರಕೆ ದಾಳಿಯನಿಟ್ಟು ಕೆಲಬರ |
ಮರುಗಿಸಿದ ಬಲ ತೋರೆಲಾ || 63 ||

ಸುಡು ಸುಡಾಮೋರೆಯೆಲೊ ಮೈಗಣ್ಣನೆ ನಿನ್ನ |
ಹೊಡೆದು ವಿಜಯದೊಳೇರಲಿಹೆ ನೀ |
ನುಡಿಯದಿರು ಬಡಿವಾರವ || 64 ||

ಖೋಡಿ ದಾನವ ಬಿಲ ಹೊಕ್ಕ ಮೂಷಿಕ |
ಓಡಲುಂಟೇ ಸರ್ಪಮುಖದಿಂ |
ಕೂಡಿ ಬಂತೈ ಕಾಲವು || 65 ||

ತಿಳಿಯೆನೇ ನಿನ್ನ ಗಂಡುತನವ ಹಿಂದೆ |
ಅಳುಕಿ ಗಿರಿವನ ಹೊಕ್ಕ ನಡೆ ಹೆಣ |
ಬಳಗಕಾವುದು ಪೌರುಷ || 66 ||

ಧಣುರೆ ಸಾಕು ನಿಮ್ಮಗ್ಗಳಿಕೆಯು ವ್ಯರ್ಥ |
ಕೆಣಕಿ ಶೈಮಿನಿಗೈದುವಾ ಬಲು |
ಹೆನುತಲೆಚ್ಚನು ಬಾಣವ || 67 ||

ಛಿದ್ರಿಸುತ್ತದ ಮಧ್ಯಮಾರ್ಗದಿ ಬೇಗ |
ಕ್ಷುದ್ರಶರವರ್ಷವನೆ ಸುರಿಸಿದ |
ನದ್ರಿಹರನಾ ಶಿರದೊಳು || 68 ||

ಒಡನೆ ಕ್ರೋಧದಿ ಕಡಿದಿಕ್ಕಿ ವಜ್ರವ |
ನಿಡಲು ಜಾರಿದ ಖಳನ ಕಾಣುತ |
ನಡೆದನಾತನ ಹಿರಿಯನು || 69 ||

**ಪಂತುವರಾಳಿ – ಮಟ್ಟೆ**

ನಿಂದೆಯಾ ಮಹೇಂದ್ರ ಸಮರ | ಕೆಂದು ನಮ್ಮೊಳು |
ಹೊಂದಲುಂಟೆ ವಿಜಯ ಪಥವ | ಮಂದತನದೊಳು ||
ಚಂದವಾಯ್ತು ದಾನವೇಂದ್ರ | ಬಂದ ಸ್ಥಿತಿಯಿದು |
ಹಿಂದಣವರ ಗತಿಯ ನೋಡಿ | ಹಿಂದೆ ಸರಿವುದು || 70 ||

ಸರಿವುದುಂಟೆ ದೇವ ತತಿಯ | ಗರುವ ಮುರಿಯದೆ |
ಹಿರಿಯ ಭಾಗ ಪಡೆದು ಸ್ವರ್ಗ | ಸಿರಿಯ ಮೆರೆಸದೆ ||
ಮೆರೆಸಲುಂಟೆ ಮೃತ್ಯು ಗಣವ | ಕರೆದು ಮಾರಿಯ |
ಬರಿದೆ ಬಗುಳಿ ಸಾವುದೇಕೆ | ಮರೆದು ನೀತಿಯ || 71 ||

ನೀತಿ ನ್ಯಾಯ ನಿಮ್ಮ ಕೂಡಿ | ಬೀತುದಿಲ್ಲವೈ |
ಘಾತಕಿಗಳನಿರಿದು ಲೋಕ | ಖ್ಯಾತಿ ಪಡೆವೆವೈ ||
ಪಾತಕಿಗಳಾಗಿರುವ ನಿಮ್ಮ | ಖ್ಯಾತಿ ಯಾವುದೊ |
ಘಾತಿಗೈದು ನರಕದಲ್ಲಿ ಹೂತು ಹೋಹುದೊ || 72 ||

ತಾರಕಾಕ್ಷನಾಗ ರೌದ್ರ | ವೇರಿ ಖತಿಯಲಿ |
ಘೋರತರಾಸ್ತ್ರವನು ಬಿಸುಟ | ನಾರುಭಟೆಯಲಿ ||
ವೀರಶುನಾಸೀರನದರ | ಚೂರುಗೈಯಲು |
ಕ್ರೂರನೊಂದು ಶಕ್ತಿಯೆಸೆದ | ಭಾರಿ ಭರದೊಳು || 73 ||

**ಕಂದ ಪದ್ಯ**

ತಡೆಯಲ್ಕಾಗದ ಶಕ್ತಿಯ |
ಹೊಡೆತದೊಳಾ ಶಕ್ರನಿರದೆ ಹಿಂಜಾರಲ್ ತಾ ||
ನೊಡನಗ್ನಿಯು ಸಾಗರದಾ |
ವಡಬನವೋಲೆದ್ದು ರಾಕ್ಷಸಂಗಿದಿರಾದಂ || 74 ||

**ಕಾಪಿ - ಅಷ್ಟ**

ಭಾಪು ಮಝರೆ ವೀರದನುಜನೆ | ಸುಪ್ರ |
ತಾಪದಿ ಕೆಣಕಿ ನೋಡೆನ್ನನೆ ||
ಕೋಪದೊಳುರುಹುವೆನೀಗಳೆ | ಬಿಡು |
ಕಾಪಥವನು ನಡೆಯುತ್ತಲೆ || 75 ||

ಯಾರು ನೀನಗ್ನಿದೇವನೆ ಹೋಗ | ಯುದ್ಧ |
ಸಾರದೆ ಸರ್ವಭಕ್ಷಕನಾಗ ||
ವಾರತೆಯರಿತಿಹೆ ನಿನ್ನಯ | ಗರ್ವ |
ವೇತಕೆ ಮುರಿವೆನಾ ಬಲ್ಮೆಯ || 76 ||

ಏಕೆ ಹೆಮ್ಮೆಯ ಮಾತು ನಡೆ ಧೂರ್ತ | ನಿನ್ನ |
ಸಾಕಿದಯ್ಯನ ಕಥೆ ಕೇಳತ್ತ ||
ಶ್ರೀಕಂಠನೊಲುಮೆ ನಮ್ಮೊಳಗಿರೆ | ಜಯ |
ಸೋಕದು ನಿಮಗೆ ನೀವರಿಯಿರಿ || 77 ||

ಕುಲದೈವವಿರೆ ಶಿತಿಕಂಠನು | ವರ |
ಬಲವಿತ್ತು ಕಾಯ್ದಿರೆ ಬ್ರಹ್ಮನು ||
ಗೆಲವು ನಮ್ಮಾಧೀನವಿದೆ ನೋಡ | ವ್ಯರ್ಥ |
ಹಳಚಿ ಕಂಗೆಡುವಿರೇತಕೊ ಗಾಢ || 78 ||

ತೋರು ತೋರಾ ಪುಣ್ಯವಂತರ | ಜಯ |
ಹೇರಿ ಬಾಳಿದ ದಾನವೇಂದ್ರರ ||
ಹೀರುವೆ ನೆತ್ತರನೆನ್ನುತ್ತ | ಕೈ |
ಮೀರಿಯೆಚ್ಚನು ವೈಶ್ವಾನರನತ್ತ || 79 ||

**ವಾರ್ಧಕ**
ಇಂತು ವೈಶ್ವಾನರಂ ಸಮಸತ್ವದಿಂ ಕಾದಿ |
ಪಿಂತಿರುಗಲೆತ್ತಿ ನೈಋತಿ ವರುಣ ಮಾರುತ ಕೃ |
ತಾಂತಾದಿ ದಿಕ್ಪತಿಗಳಂತೆ ವಿದ್ಯುನ್ಮಾಲಿ ಕಮಲಲೋಚನರ ಕೂಡೆ ||
ಮುಂತೆ ಸೋಲವನೈದಲಾಗ ಸುರ ಸಂತತಿಗ |
ಳಂತರಂಗದಿ ಮರುಗಿ ಸ್ವರ್ಗ ಸಾಮ್ರಾಜ್ಯದಾ |
ಚಿಂತೆಯೆಲ್ಲವ ಮರೆತು ವಿಪಿನಾಂತರಕೆ ನಡೆದರೇನೆಂಬೆನಾ ಬಗೆಯನು || 80 ||

**ಕಾಂಭೋದಿ - ಝಂಪೆ**
ಈ ತೆರದೊಳನಿಮಿಷರು | ಧಾತುಗೆಟ್ಟೋಡಿದರೆ |
ದೈತೇಯರೇರಿದರು ದಿವವ ||
ಭೀತಿಯಿಲ್ಲದೆ ತ್ರಿಪುರ | ನಾಥನಡರಿದನು ಸುರ |
ನಾಥ ಪಟ್ಟವನು ವಿಭವದಲಿ || 81 ||

ನೋಡಿ ಕೊಂಡಾಡಿದನು | ಗೂಢಪರ ವೈಭವಕೆ |
ಜೋಡುಂಟೆ ನಮ್ಮ ಪೌರುಷದಿ ||
ಕೂಡಿತಲ್ಲವೆ ಹಿಂದೆ ಕಾಡಿನಲಿ ನಾವ್ ಪಟ್ಟ |
ಪಾಡುಗಳ ಮರೆತೆವೀ ದಿನಕೆ || 82 ||

ಎಂದು ತ್ರಿಪುರರು ಮಹಾನಂದದಿಂದಿರಲಿತ್ತ |
ವೃಂದಾರಕರು ವನಾಂತರದಿ ||
ನೊಂದುಕೊಳುತಿರ್ದರಾ | ಬೆಂದ ವಿಧಿಯನು ಬೈದು |
ಎಂದಿಗಾಹುದೊ ಸೌಖ್ಯವೆಂದು || 83 ||

ಹಲವು ದಿನ ಮಾಸ ಋತು | ಹಲವು ವತ್ಸರ ಕಾಲ |
ಕಳೆದವೆನಿತೋ ಕಷ್ಟದಿಂದ ||
ಗಳಿಗೆ ಗಳಿಗೆಗಳಲ್ಲಿ | ಹಲವು ಬಗೆ ಯೋಚಿಸುತ |
ಬಲವೈರಿ ನುಡಿದನೊಂದಿವಸ || 84 ||

ಈ ವಿಧದ ಭಂಗಕಿನ್ನಾವನೈ ಹೊಣೆ ಮಹಾ |
ದೇವನೋ ಕಾವ ಹರಿಯಜರೋ ||
ಆವಾವ ವರಗಳ | ನ್ನೀವ ಪರಮೇಷ್ಠಿಗಿದ |
ನಾವರುಹಬೇಕು ಲೇಸಹುದು || 85 ||

**ಕಂದ ಪದ್ಯ**

ಎಂದಾ ಸುಮನಸರೊಡನೈ |
ತಂದನು ಪುರುಹೂತ ಸತ್ಯಲೋಕಕೆ ಜವದಿಂ ||
ವಂದಿಸಿ ಕಮಲಜನಂಘ್ರಿಗೆ |
ಬಂದಾ ಪರಿಭವವನಿಂತು ಪ್ರಾರ್ಥಿಸುತೆಂದಂ || 86 ||

**ಸುರುಟಿ - ಏಕ**

ವಾಗೀಶನೆ ಕೇಳ | ತ್ರಿದಶರಿ |
ಗಾಗಿಹ ಬವಣೆಗಳ ||
ಬೀಗಿದ ಖಳರಾ ಬೇಗೆಯನಡಗಿಸಿ |
ತಾಗಿದ ಕಷ್ಟವ ನೀಗಿಸಿ ಪೊರೆಯೈ || 87 ||

ಬಲುಸೊಕ್ಕಿನ ಖಳರು | ತಾರಕ |
ನಳಿದಾ ಮೇಲಿಹರು ||
ನಳಿನಭವನೆ ನಿನ್ನೊಲುಮೆಯ ವರದಿಂ |
ಸುಳಿಯಗೊಡರು ಸುರಕುಲವನು ಸ್ವರ್ಗದಿ || 88 ||

ದೈತ್ಯರ ನುಡಿ ಹೊರತು | ನಡೆಯದು |
ಸತ್ಯಾತ್ಮರ ಮಾತು ||
ಮಿಥ್ಯೆ ಮಾಯೆ ದುರ್ವ್ಯತ್ತಿಗಳೇ ಮೈ |
ಯೆತ್ತಿಹವೈ ಕಾರ್ಗತ್ತಲೆಯಂತೆ || 89 ||

ಮನುಮುನಿಗಳು ಸಹಿತ | ನಮ್ಮೊಡ |
ವನವನ ಸುಳಿಯುತ್ತ ||
ದಿನಗಳೆವಾ ಸ್ಥಿತಿಯನು ಬಣ್ಣಿಪರೇ |
ಫಣಿಪತಿಗಾದರು ಗಣಿಸಲಸಾಧ್ಯ || 90 ||

**ಸಾವೇರಿ - ಅಷ್ಟ**

ಕೇಳಿರೆಲ್ಲ | ಧೈರ್ಯವ-ತಾಳಿರೆಲ್ಲ ||ಪಲ್ಲವಿ||
ಪೇಳಿರೆಲ್ಲ ಸುರ | ಜಾಲಸಹಿತ ಬಂ |
ದೂಳಿಗವನು ಶಿವ | ನೋಲಗದಲ್ಲಿ ||ಅನುಪಲ್ಲವಿ||
ವರಗಳನೀವರೆ ದೊರೆ ತಾನಲ್ಲದೆ |
ಹೊರೆವರು ಬೇರೆಂದರಿಯದೆ ನಿಮಗೆ ||
ಪರಿಪರಿ ವಿಧದಿ ಬರುವ ಬವಣೆಗಳ |
ಹರಿಸಲು ಹರಿಹರರಿರುತಿಹರೈಸಲೆ || 91 ||

ಅದರಿಂದೆಲ್ಲರು ಬೆದರದಿರೀಗ |
ಮದನಾಂತಕನೊಡನರುಹಿರಿ ಬೇಗ |
ಕದನದಿ ತ್ರಿಪುರರ ಸದೆದು ಸ್ವರ್ಗ ಸುಖ |
ವೊದಗಿಸಿ ತ್ರಿಜಗವ ಮುದಗೊಳಿಸುವನೈ || 92 ||

**ಕಂದ ಪದ್ಯ**
ಬಳಿಕ ದಿವೌಕಸ ನಿಕರಂ |
ನಳಿನಜನಂ ಕೂಡಿ ಶೌರಿಯನೊಡಗೊಂಡಾ ||
ಘಳಿಲನೆ ನಡೆದರ್ ರಜತಾ |
ಚಲದೆಡೆಗಂ ಪಾಹಿ ಹರ ನಮೋ ಜಯವೆನುತಂ || 93 ||

**ಜಂಜೂಟಿ - ಏಕ**
ಪ್ರಾಣನಾಥನೆ ಕೇಳು | ಯಾವ ಯೋಚನೆ ಪೇಳು |
ಏನು ಚೋದ್ಯವ ಕಂಡು | ನೆನೆದೆ ಚಿತ್ತದೊಳು ||
ದಾನವರಾರೊ ಪುಟ್ಟಿ | ಹಾನಿಗಯ್ದರೆ ಲೋಕ |
ಮಾನ ಮೀರಿದರೆಮ್ಮ ಸ್ಥಾನಕ್ಕೈದಿದರೆ || 94 ||

ಕೇಳೆಲೆ ಗಿರಿಜಾತೆ | ಖೂಳ ದೈತ್ಯರ ಚರಿತೆ |
ಗಾಳಿಗೋಪುರವಲ್ಲ | ಹೇಳುವೆನೆಂತೊ ||
ಸಾಲು ಕಟ್ಟಿದೆ ದುಷ್ಟ | ಜಾಲವೀರೇಳುಲೋಕ |
ಗೋಳುಹೊಯ್ಯುತಲಿದೆ | ತಾಳುವರಿಹರೇ || 95 ||

ಅಂತಾದರೆಮ್ಮ ಸುರ | ಸಂತಾನಕತಿ ಕಷ್ಟ |
ಮುಂತೇನು ಧರ್ಮಾತ್ಮ | ರೆಂತು ಬಾಳ್ವರೈ ||
ಕಾಂತೆ ಕೇಳಸುರರ | ಸಂತೆಯೇರಿದೆ ಸ್ವರ್ಗ |
ಚಿಂತೆಯೊಳಿದೆ ದೇವ | ಸಂತತಿಯೀಗ || 96 ||

ಮೋಸವಾಯಿತು ಕಾರ್ಯ |  ನಾಶಮಾಡದೆ ಖಳರ |
ಆ ಸುರಾಂಗನೆಯರಿ | ನ್ನೇಸು ನೊಂದಿಹರೊ ||
ನಾಶಕಾಲವು ಬಂದು | ದೈಸೆ ತ್ರಿಪುರರಿಗೆ |
ದೂಷಿಸಲೇಕೆ ವಿಧಿಯ | ಭ್ಯಾಸ ಹಾಗಿರಲು || 97 ||

ಹರನೆ ನೀನಿದನೆಲ್ಲ | ವರಿತು ಕುಳ್ಳಿರೆ ಹೀಗೆ |
ದುರುಳರೇರ್ದರು ಲೋಕ | ವುರಿಯುವುದಾಯ್ತು ||
ಗಿರಿಜೆ ಕೇಳ್ ತ್ರಿಪುರರನು | ಉರುಹಲಿರ್ದಪೆನೀಗ |
ಮೊರೆಯಿಡುತಿದೆ ನೋಡ | ಸುರಗಡಣ ಕೂಡಿ || 98 ||

**ಕಂದ ಪದ್ಯ**
ಕರುಣಾಕಟಾಕ್ಷದಿಂದಖಿ |
ಳರ ಕಾಯಲ್ ತ್ರಿಪುರ ಮಥನಗೈವಾರಂಭಂ ||
ಪರಿಕಿಸುವೆನೆಂಬ ಸಮಯದೊ |
ಳಿರಗಿದರೈತಂದು ವಾಸವಾದ್ಯರ್ ಭರದೊಳ್ || 99 ||

**ವಾರ್ಧಕ**
ಜಯ ಜಯತು ಗೌರೀಶ ಜಯತು ಪನ್ನಗಭೂಷ |
ಜಯಜಯ ಸುರಾಸುರೋರಗವಿನುತ ಭವರಹಿತ |
ಜಯತು ಭೂತಾಧೀಶ ಕೋಟಿರವಿಸಂಕಾಶ ಸರ್ವೇಶ ವ್ಯೋಮಕೇಶ ||
ಬಯಸಿದಿಷ್ಟವನಿತ್ತು ದಯೆಯಿಂದ ಶರಣನನು |
ನಯದಿ ಪರಿಪಾಲಿಸುವ ಲಯಕಾಲರುದ್ರನೀ |
ಭಯವ ಹೋಗಾಡಿಸುತ ಪೊರೆಯೆಂದು ಪ್ರಾರ್ಥಿಸಲ್ ಮೈದೋರುತೆಂದ ಹರನು || 100 ||

**ಕಲ್ಯಾಣಿ - ಏಕ (ಏಕಿನಿತುಸುರುವಿರಿ)**
ಸಾಕು ನೀವಳಲದಿರಿ | ಬಲ್ಲೆನು ನಿಮ್ಮ|
ಶೋಕವ ಸೈರಿಸಿರಿ ||
ಸಾಕುಮಾಡಿರಿ ದನುಜರೆಸಗಿದ |
ಆ ಕಠಿನ ಕಷ್ಟಗಳನರಿಯೆನೆ |
ಲೋಕಕಂಟಕರನ್ನು ದಿನದಿನ |
ಏಕೆ ಸೃಷ್ಟಿಪನೋ ವಿಧಾತ್ರನು || 101 ||

ತಾರಕಾತ್ಮಜರಿಂದಾದ | ದುಷ್ಕೃತ್ಯವ |
ದೂರುವುದೇನು ಚಂದ ||
ಸಾರ ತಿಳಿಯದೆ ವರವನಿತ್ತಾ |
ಕಾರಣದೊಳಿಂತಾಯ್ತು ಹಾನಿಯು || 102 ||

ಘೋರ ಕೃತ್ಯವನೆಸಗಿ ಲೋಕವ | ಬಿಡದೆ ಯುದ್ಧ |
ಗೈದು ಪಡೆವ ಜಯವ ||
ಹೋದ ದನುಜರಿಗಿಂತ ಬಲಯುತ |
ರಾದ ತ್ರಿಪುರರ ತರಿವುದೆಂತೋ |
ಭೇದವಿಲ್ಲದೆ ಸರ್ವ ಶಕ್ತಿಯ |
ನಾಧರಿಸುತೊಟ್ಟಾಗಿ ಕಾದುವ || 103 ||

**ಸಾಂಗತ್ಯ - ರೂಪಕ**
ಪರಶಿವನಿಂತೆನೆ | ಪರಮೇಷ್ಠಿ ಮೊದಲಾದ |
ಸರುವರು ಹಾಗಾಗಲೆಂದು ||
ವರ ವಿಶ್ವಕರ್ಮನ | ಕರೆಸಿ ಪೇಳ್ದರು ಯುದ್ಧ |
ಪರಿಕರವಣಿಯಾಗಲೆಂದು || 104 ||

ಆ ಮಹಾ ತ್ರಿಪುರವ | ಹೋಮವನೆಸಗಿ ನಿ |
ರ್ನಾಮ ಗೈವರೆ ದಾನವರನು ||
ವ್ಯೋಮಕೇಶನೆ ಬಲ್ಲ | ನೀ ಮೂದೇವರೊಳೆಂದು |
ನೇಮದಿಂದೊಟ್ಟು ಸಾರಿದರು || 105 ||

ಗರುಡ ಗಂಧರ್ವಾದಿ | ಸುರರು ಸೇನೆಯ ಪಟ್ಟ |
ಪರಮೇಶ್ವರಗೆ ಕಟ್ಟಿ ಬೇಗ ||
ಶರಣೆಂದು ಹಾಡಿ ಸ | ತ್ಕರಿಸಿ ಪೂಜಿಸಿದರು |
ಪರಿಪರಿ ಕಾಣಿಕೆಯಿತ್ತು || 106 ||

ಸ್ಮರನಯ್ಯನಾಗಳೆ | ಹರನಿಗೊಪ್ಪುವ ದಿವ್ಯ |
ಶರವಾಗಲೊಪ್ಪಿದ ಭರಕೆ ||
ವಿರಚಿಸಿದನು ದೇವ | ವರಶಿಲ್ಪಿ ಚಾಪವ |
ಸುರಶೈಲದಾಧಾರದಿಂದ || 107 ||

ಬಿಡದೆ ಚಂದ್ರಾದಿತ್ಯರೊಡನೆ ಗಾಲಿಗಳಾಗೆ |
ಪೊಡವಿಯು ರಥವಾಯ್ತು ಕೂಡೆ ||
ನುಡಿವ ವೇದಗಳು ಇ | ಕ್ಕೆಡೆಯ ರಾಜಿಗಳೇಳು |
ಜಡಧಿಗಳಚ್ಚಾದುವೈಸೆ || 108 ||

ಕನಕಾಚಲವೆ ಛತ್ರ | ಘನವಿಂಧ್ಯಾದ್ರಿಯೆ ಹಾಸು |
ಫಣಿಪನೆ ಸಿಂಜಿನಿಯಾಗೆ ||
ಹೊನಲುಕ್ಕುವಂಥ ವಾಹಿನಿಗಳಾಂತವು ಕೂಡಿ |
ಮಿನುಮಿನುಗುವ ಚಾಮರಗಳ || 109 ||

**ಭಾಮಿನಿ**
ಜಡಜಸಂಭವನಾಗ ವಾಘೆಯ |
ಪಿಡಿದು ಪ್ರಣವದ ಚಮ್ಮಟಿಕೆಯಂ |
ಜಡಿದು ಚಪ್ಪರಿಸಿದನು ಶ್ರುತಿಮಯ ಹಯಗಳನು ಭರದಿ ||
ಮೃಡನೆ ಚಿತ್ತೈಸೆಂದು ವಿಬುಧರ |
ಗಡಣ ಕೈವಾರಿಸಲು ಧೂರ್ಜಟಿ |
ಯೆಡದ ಪಾದವನೂರಿ ನಿಂದನು ನಡುಗಲಾರಥವು || 110 ||

**ಕೇದಾರಗೌಳ - ಅಷ್ಟ**
ಘಳಿಲನೆ ಭೂಚಕ್ರ | ಬಿರಿಯೆ ರಸಾತಳ |
ನಳಿನಾಕ್ಷ ನೋಡಿ ಬೇಗ ||
ತಳೆದು ವೃಷಾಕೃತಿ | ಯಲಿ ಹೊಕ್ಕು ನೆಗಹಿದ |
ನಿಳೆಯ ಪಾತಾಲದಿಂದ || 111 ||

ಸಂದಣಿಸಿತು ಸೇನಾ | ವೃಂದವು ತ್ರಿದಶರ |
ಮುಂದೇನಪ್ಪಣೆಯೆನುತ ||
ದುಂದುಭಿ ನಾದದೊ | ಳೊಂದಾಗಿ ಬರಲೆಲ್ಲ |
ಅಂಧಕಾಂತಕನೆಂದನು || 112 ||

ಹೋಗಲೀ ದಂಡು ಮುಂ | ದಾಗಿ ದಾಳಿಯನಿಟ್ಟು |
ತಾಗಿ ಹತ್ತಲಿ ದುರ್ಗವ ||
ಸಾಗಿ ಬರಲಿ ದೈತ್ಯ | ಸಾಗರವನು ಈಂಟಿ ಕೈ |
ಗೈದು ಜಯಸಿರಿಯ || 113 ||

ಎನಲು ಭೋಯೆಂದು ಭೋಂ | ಕನೆ ಕುಣಿದೆದ್ದರು |
ಘನವೇಗದಿಂದ ಸಾಗಿ ||
ದನುಜರ ತ್ರಿಪುರವ | ನಣೆದರು ಹಗಲಿನ |
ಕೊನೆಗಳಿಗೆಯ ಕಾಲಕೆ || 114 ||

**ಸೌರಾಷ್ಟ್ರ - ತ್ರಿವುಡೆ**
ಕೇಳಿ ತಾಪಸರಿತ್ತಲಾ ಖಳ |
ಜಾಲದೊಡನಾ ತಾರಕಾಕ್ಷನು |
ಕಾಳರಾತ್ರಿಯೊಳೆದ್ದು ನುಡಿದನು | ಓಲಗದಲಿ || 115 ||

ಸೋಲದಲಿ ಬೆಂಡಾಗಿ ಸ್ವರ್ಗದ |
ಬಾಳುವೆಯನೀಡಾಡಿ ದಿವಿಷದ |
ಜಾಲವೇ ಮೊರೆಯಿಟ್ಟುದಂತೆ ತ್ರಿ | ಶೂಲಿಯೆಡೆಗೆ || 116 ||

ಬಂದ ಬಲು ಭಂಗಗಳ ತಾ ಬಗೆ |
ದಂದು ತ್ರಿದಶರ ಸೈನ್ಯದೊಡನೈ |
ತಂದನಲ್ಲಿಗೆ ಸಮರಕೆನುತಾ | ಇಂದುಧರನು || 117 ||

ಬೀಡು ಬಿಟ್ಟಿಹುದಿಲ್ಲಿ ಹಗೆಗಳ |
ಗೂಢವೆಂತುಟೊ ತಿಳಿಯದೈ ಧುರ |
ಹೂಡಲೋ ಕೊಂಡಾಡಿ ಪ್ರೀತಿಯ | ಬೇಡಿಕೊಳಲೋ || 118 ||

ಕೇಳುತಾ ನುಡಿಗೊಪ್ಪಿ ಕೆಲಬರು |
ಕಾಳಗವೊ ಸಂಧಾನವೋ ಹಿ |
ಮ್ಮೇಳವಾಗಿಹೆವೆನಲು ವಿದ್ಯು | ನ್ಮಾಲಿಯೆಂದ || 119 ||

ತ್ರಿಜಗವೆಮ್ಮಾಧೀನದೊಳಗಿರೆ |
ಭುಜಗಭೂಷನೆ ಬರಲಿ ಬಿಡುವುದೆ |
ಅಜನ ವರವೊಂದಿರಲು ತಡೆಯೇಂ | ವಿಜಯವೈಸೆ || 120 ||

ಕಷ್ಟನಿಷ್ಠುರವಿರಲಿ ಮಾನವ |
ಸುಟ್ಟು ದೈನ್ಯದಿ ಬಾಳಲೇಂ ಫಲ |
ಹುಟ್ಟು ಸಾವಿಂಗಳುಕಿ ದೊರೆತನ | ಬಿಟ್ಟರುಂಟೇ || 121 ||

ಎನಲು ಹರಿ ಹೂಂಕರಿಸುತೆಂದನು |
ಜನಕ ಕೇಳ್ ಮಡಿದವರನೆಬ್ಬಿಪ |
ಘನತೆ ತನ್ನೊಳಗಿರಲು ಸಮರಕೆ | ಜುಣುಗಲೇಕೈ || 122 ||

ಬರಲಿ ಶಕ್ರನೊ ಹರಿಯೊ ಹರನೋ |
ಧುರವ ಜೈಸುವೆ ಕೊಡಿಸು ವೀಳ್ಯವ |
ಸರಭಸದಿ ಹೋರಾಡುವಾ ನಿ | ರ್ಜರರ ಕೂಡೆ || 123 ||

**ವಾರ್ಧಕ**
ಎಂದಾಗ ತ್ರಿಪುರ  ದನುಜೇಂದ್ರರಾಹವಕೆ ಬಲ |
ವೊಂದಾಗಲೆಂದು ನೇಮವನಿತ್ತ ಭರದೊಳೈ |
ತಂದರೈ ಮೂಕ ದುರ್ಮುಖ ಜಂಭ ಶುಂಭ ದುರ್ಜಯ ಶಿಂಶುಮಾರಾದ್ಯರು ||
ಸಿಂಧುರಾಶ್ವ ವರೂಥಗಳ - ಘೋರ ಶಸ್ತ್ರಾಸ್ತ್ರ |
ವೃಂದಗಳನೊದಗಿಸುತ ಸರ್ವ ಸನ್ನಾಹದಿಂ |
ನಿಂದು ಕಾದಿರ್ದರಾತ್ರಿಪುರ  ದುರ್ಗಂಗಳಂ ರಣವಾದ್ಯಗಳ ಮೊಳಗುತ || 124 ||

**ಮಾರವಿ - ಏಕ**
ಹರನಾಗಳೆ ಸುರ | ಗಿರಿಚಾಪವ ಝೇಂ |
ಕರಿಸಲು ಮೂಲೋಕ ||
ತಿರುಗಿತು ತಿರ್ರನೆ | ದುರುಳರ ತ್ರಿಪುರವು |
ಭರದಿಂದೊಡಗೂಡೆ || 125 ||

ಮತ್ತಾ ಹೂಂಕೃತಿ | ವೆತ್ತು ಬಲಿದ ಕೈ |
ಯೆತ್ತಲು ಗಗನದಲಿ ||
ಮುತ್ತಿತು ಹೊಗೆ ಕಾ | ರ್ಗತ್ತಲೆ ಸಾಗರ |
ವತ್ತಿತು ನೀರಸದಿ || 126 ||

ತಾರಕಸುತನಿಂ | ತಾ ರೌದ್ರದಿ ಕಂ |
ಡೇರಿದ ಕ್ರೋಧದಲಿ ||
ಕಾರುತ ಕೆಂಗಿಡಿ | ಘೋರಾಕಾರದೊ |
ಳಾರುಭಟಿಸುತೆಂದ || 127 ||

**ಶಂಕರಾಭರಣ - ಅಷ್ಟ**
ಏನಿದೇನಾಶ್ಚರ್ಯ ನಮ್ಮ |
ಸ್ಥಾನದೊಳಗುತ್ಪಾತವಾಯ್ತು |
ಸ್ಥಾಣು ಸೇನೆ ಹೊಕ್ಕ ಬಗೆಯ | ಕಾಣದಾದಿರೆ ||
ತ್ರಾಣವೆನಿತೊ ನಮ್ಮ ದುರ್ಗ |
ಹಾನಿಗೆಯ್ದು ಹೋಹರುಂಟೆ |
ಪ್ರಾಣಕಾಗಿ ಸುಗಿದು ಚಾಣಾ | ಹಾನಿಯಾದಿರೆ || 128 ||

ಆಗಲೇಂ ಪ್ರಚಂಡ ಪವನ |
ವೇಗದಿಂದ ನಡೆದು ಶತ್ರು |
ಮೇಘ ಬಲವ ತೊಡೆದು ಬರುವ | ಬೇಗದಿಂದಲಿ ||
ಸಾಗಲೈ ಸಮಸ್ತ ಸೈನ್ಯ |
ಸಾಗರದೊಳೊಂದಾಗಿ ವಿಜಯ |
ಭೋಗದಲ್ಲಿ ಮೆರೆವುದೆನುತ | ಕೂಗಿ ಪೇಳ್ದನು || 129 ||

**ಭಾಮಿನಿ**
ತಾರಕಾಕ್ಷನನುಜ್ಞೆಯಿಂದಾ |
ಘೋರ ರಕ್ಕಸರೊಂದುಗೂಡಿ ಮ |
ಹಾ ರಣೋತ್ಸಾಹದಲಿ ಪೊರಟರು ದಿಕ್ತಟವು ಮೊಳಗೆ ||
ಭೇರಿ ತಮ್ಮಟೆ ಕೊಂಬು ಕಹಳೆಗ |
ಳೋರಣದಿ ಭೋರ್ಗುಡಿಸಿ ಬರುತಿರೆ |
ತಾರಕಾಕ್ಷನ ತನಯ ಹರಿಗಿದಿರಾದನಮರೇಂದ್ರ || 130 ||

**ಘಂಟಾರವ - ಅಷ್ಟ**
ದುರುಳ ದೈತ್ಯರೆ ಲೇಸು ಭಳಿರೆ ನಮ್ಮ |
ಸಿರಿಯ ಸೂರೆಯಗೊಂಡು ಹರನೊಳು |
ಮೆರೆಸಬಲ್ಲಿರೆ ಶೌರ್ಯವ || 131 ||

ಎನಲು ತಾರಕ ಪೌತ್ರನೆಂದನು ನಿಮ್ಮ |
ಘನತೆಯನು ನಾವರಿಯೆವೇ ವನ |
ವನವ ಸುತ್ತಿದ ಬಲುಹನು || 132 ||

ಸಾಕು ನಿಮ್ಮ ಹೆಗ್ಗಳಿಕೆ ಸುಡಲಿ ನೋಡ |
ಲೋಕ ಕಂಟಕರಾಗಿ ಸಾಯ್ವಿರಿ |
ಭೇಕಗಳ ಬಡಿದಾಟದಿ || 133 ||

ಹೊಲ್ಲದಾಮಾತು ನಡೆಹೋಗಾಚೆಗೆ ಯುದ್ಧ |
ಸಲ್ಲದೆಮ್ಮೊಳು ಅಜಗಜಾಂತರ |
ವೆಲ್ಲ ಹೊಸಪರಿ ನೋಡೆಲಾ || 134 ||

ಬಿಡಿಬಿಡಾ ಹೆಮ್ಮೆ ಬ್ರಹ್ಮಾನುಗ್ರಹದಿಂದ |
ಕೆಡಿಸಿ ಲೋಕವ ನಡೆಸಿ ಪಾಪವ |
ಮಡಿವ ಬಗೆ ಜಗವರಿಯದೆ || 135 ||

ಎಂದು ಬೊಬ್ಬಿರಿದಾರ್ದು ಶರೌಘಗ |
ಳಿಂದ ಮುಸುಕಲು ಕಡಿದು ಪ್ರತಿ ಶರ |
ಸಾಂದ್ರವೆಚ್ಚನು ವಾಸವ || 136 ||

**ಕಂದಪದ್ಯ**
ಇತ್ತಲ್ ಸಮಸತ್ವದಿ ಕಾ |
ದುತ್ತಿರಲೊಂದೆಡೆ ಸಮಸ್ತ ಸೇನಾವ್ಯೂಹಂ ||
ತತ್ತರಿಸಲ್ ಮಯದಾನವ |
ಹತ್ತಿರ ಕರೆದೆಂದನಮರಶಿಲ್ಪಿಯನಾಗಳ್ || 137 ||

**ಕಾಂಭೋದಿ - ಝಂಪೆ**
ಭಳಿಭಳಿರೆ ಲೇಸಾಯ್ತು | ಛಲ ವಿಶ್ವಕರ್ಮ ನೀ |
ಬಲವಂತನಹೆ ದೇವ ಬಲದಿ ||
ತಿಳಿಯದೆನ್ನಿರವ ಕೈ | ಚಳಕದಿಂ ಬಲಿದೆಯಾ |
ಬಲುಬಗೆಯ ಯುದ್ಧ ಸನ್ನಹವ || 138 ||

ಬಿಡುಬಿಡಾಮಾತು ಕಾ | ಲ್ದೊಡಕಿ ಬೀಳುವ ದನುಜ |
ರೆಡೆಗೆ ನೀನೊಬ್ಬ ಗುರುವೈಸೆ ||
ಕಡು ಸೊಕ್ಕಿದರು ಲೋಕ ಕೆಡಿಸಿದರು ವಿಧಿಯವರ |
ಪಡೆದೇರಿದರು ನಾಕ ಪದವ || 139 ||

ಹೌದು ತಪ್ಪೇನು ದಾ | ಯಾದರಲಿ ಹಿರಿಯರಾ |
ದಾದೈತ್ಯರೇರಿದರೆ ದಿವವ ||
ಸಾಧಿಸಿದರೈ ವಿಜಯ | ಭೇದ ಕಲ್ಪಿಸಿ ನ್ಯಾಯ |
ಹಾದಿ ಬಿಟ್ಟವರಾರು ಜಗದಿ || 140 ||

ಎಷ್ಟು ಪೇಳ್ದರು ದನುಜ | ಕಟ್ಟಳೆಯ ಬಗೆ ಬೇರೆ |
ಹುಟ್ಟುಗುಣ ಬಿಟ್ಟಪರೆ ಖಳರು ||
ಒಟ್ಟಾಗುವಂತೆ ನೀ ಕಟ್ಟಿಕೊಟ್ಟಾ ಲೋಹ |
ಪಟ್ಟಣಂಗಳನು ಹೊಸತೆರದಿ || 141 ||

ಹೊಸತಾಯ್ತೆ ಲೇಸು ನಾ | ನೆಸಗಿದಾ ಪುರಗಳಲಿ |
ಅಸುರರೇರಿದರೆ ಮತ್ಸರವೆ ||
ಮಸಗಿತೆನ್ನಾ ಕೀರ್ತಿ | ಯೆಸಕದಲಿ ನೀನಿಂತು |
ಬೆಸೆದ ಸಾಹಸವು ಹಿರಿದಲ್ತೆ || 142 ||

ಹೋಗಲಾವಾದ ಮುಂ | ದಾಗಿ ತೋರುವ ನಮ್ಮ |
ಕೈಗುಣವನೆಲ್ಲ ಜಗವರಿಯೆ ||
ತಾಗಿದೀಯುಭಯಬಲ | ದಾಗುಹೋಗುಗಳಿಂದ |
ತೂಗಿ ನೋಡಲಿ ಸಮರ್ಥತೆಯ || 143 ||

**ಮಾರವಿ - ಏಕ**
ಕೇಳಿರಿ ಕಥೆಯನು | ಕಾಳಗಕೀರ್ವರು |
ತೋಳೆತ್ತಲು ಕಂಡು ||
ತಾಳಿದ ವಿದ್ಯು | ನ್ಮಾಲಿಯು ಕೋಪವ |
ಕಾಲಾಂತಕನಂತೆ || 144 ||

ಮಿಡುಕದಿರೈ ತೆಗೆ | ಬಿಡಿಸೊಪ್ಪಾಗದೆ |
ಹೊಡೆದಿಕ್ಕಿರಿ ಸುರರ ||
ಕಡುಗಲಿಗಳು ನಮಗೆಡಕುವರಾರೈ |
ನಡೆಯಿರಿ ಸಾಹಸದಿ || 145 ||

ಎಂದಾರ್ಭಟಿಸುತ | ಮಂದೇಹರರೆನೆ |
ನಿಂದಸುರರ ಕೂಡಿ ||
ಮುಂದೈದಲು ತಾ | ಬಂದಡ್ಡೈಸಿದ |
ನಿಂದ್ರನು ಗಜವೇರಿ || 146 ||

ಎತ್ತ ನಡೆವೆಯೆಲೊ | ಮೃತ್ಯುಮುಖಕೆ ಕುರಿ |
ತುತ್ತಾಗುವ ಹಾಗೆ ||
ವೃತ್ರಾರಿಯು | ಕೈಯೆತ್ತಲು ನಡೆವುದೆ |
ಗೋತ್ರಗಳೇರಾಟ || 147 ||

ಬಣಗು ಬಿಡೌಜನೆ ಕನಲುವೆಯೇಕೋ |
ಹೆಣಗದೆ ಹೋಗಾಚೆ ||
ವನಮೃಗಗಳವೋಲ್ ಕೊಣಕುವ ಸುರರಿಗೆ |
ಘನಪೌರುಷವುಂಟೇ || 148 ||

ಬಿಡು ಹೆಮ್ಮೆಯ ಬಾ | ಯ್ಬಡಿಕನೆ ಲೋಕದ |
ನಡವಳಿಯರಿದಪೆಯಾ ||
ಮಡಿವನ್ನೆಗ ಹುಳು | ಕೆಡುಕನೆ ಜಗಿಯುತ |
ಕೊಡಹುವೆಯನುಚಿತವ || 149 ||

**ಭಾಮಿನಿ**
ಎಂದು ವಾಸವನಧಿಕ ಸಾಹಸ |
ದಿಂದ ಕೂರಂಬುಗಳನೆಚ್ಚುರೆ |
ನೊಂದ ಸೂಕರನಂತೆ ಕೋಪಾಟೋಪದಿಂದಸುರ ||
ಮುಂದೆ ಹಾಯ್ದನು ನಿರ್ಜರರು ಹಾ |
ಯೆಂದು ಬೊಬ್ಬಿಡೆ ಶತಮುಖನ ಮೈ |
ಗುಂದಿಸುತ ದೆಸೆಗೆಡಿಸಿದನು ಭೌಮಾದಿ ನಾಯಕರ || 150 ||

**ಕಂದಪದ್ಯ**
ಮುಂದೈದುವ ದನುಜ ಮ |
ದಾಂಧ ಗಜೇಂದ್ರನ ನಿರೀಕ್ಷಿಸುತ್ತಾಕ್ಷಣದೊಳ್ ||
ಸ್ಕಂದಂ ಬುಸುಗುಟ್ಟುವ ಫಣಿ |
ಯಂದಂ ಮೇಲ್ವಾಯ್ದು ಹೂಂಕರಿಸುತಿಂತೆಂದಂ || 151 ||

**ಸಾವೇರಿ - ಅಷ್ಟ**
ನಿಲ್ಲು ನಿಲ್ಲೆಲ ದನುಜಾಧಮ | ರಣ |
ದಲ್ಲಿ ತೋರಿಸೊ ನಿನ್ನ ವಿಕ್ರಮ ||
ಬಲ್ಲಿದರಾದಿರೆ ಜಗದೊಳು | ನೋಡ |
ಲಿಲ್ಲಿಗಾಯಿತು ನಿಮ್ಮೆಯ ಬಾಳು || 152 ||

ಯಾರು ನೀನೇನೆಂದೆಯೆಲ ಪೋರ | ತಂದೆ |
ತಾರಕನನು ಕೊಂದಹಂಕಾರ ||
ತೋರು ತೋರೀಗಳೆ ಸಾಹಸ | ಇಕ್ಕಿ |
ತೀರಿಸಿ ಬಿಡುವೆನಂದಿನ ದ್ವೇಷ || 153 ||

ಹುಲ್ಲು ರಾಕ್ಷಸ ಜಂಭ ಸಾಕೆಲೊ | ಫಲ |
ವಿಲ್ಲದೆಯರಚುವೆಯೇಕೆಲೊ ||
ಕೊಲ್ಲುವಾ ರುದ್ರನ ಇದಿರಿಗೆ | ನಿಮ |
ಗೆಲ್ಲಿ ಸಾಹಸವು ಕೀಟಗಳಾಗೆ || 154 ||

ಲೇಸಾಯ್ತು ಹೋಗ ರುದ್ರನೆ ಬೇಗ | ಬರ |
ಲಾಸು ಶಕ್ತಿಯ ನೋಳ್ಪ ನಾವೀಗ |
ವಾಸಿ ಪಂಥಗಳಿರೆ ಕಾದುವ |
ಜೀವದಾಸೆಯಿದ್ದರೆ ತೂರಿ ಹೋಗುವ || 155 ||

ಎಂದು ಚಾಪವನು ಝೇಂಕರಿಸಿದ | ಬಾಣ |
ವೃಂದದಿ ಕತ್ತಲೆ ಕವಿಸಿದ ||
ಸ್ಕಂದನಾಗಳೆ ತರಿದೆಚ್ಚನು | ಶಕ್ತಿ |
ಗುಂದದ ದಿವ್ಯ ಬಾಣಗಳನು|| 156 ||

**ವಾರ್ಧಕ**
ಈ ತೆರದೊಳಸುರ ವಿದ್ಯುನ್ಮಾಲಿ ತಾರಕಾ |
ರಾತಿಯಿರ್ವರು ಮಂತ್ರ ತಂತ್ರ ಶಸ್ತ್ರಾಸ್ತ್ರ ಸಂ |
ಘಾತದಿಂ ಕಾದಿರಲ್ ಮೂಲೋಕವೇ ನಡುಗಲಾ ದಿವೌಕಸನಿಕರದ ||
ಪೂತು ಮಝರೇ ಎಂಬ ಘೋಷದಿಂದಾರ್ದು ಸ |
ತ್ವಾತಿಶಯ ಶಕ್ತಿಯಂ ತೆಗೆದಿಟ್ಟರಾಗ ಖಳ |
ಭೂತಲಕ್ಕೊರಗಲಾ ಕಮಲಲೋಚನನುರಿದು ಮಾಮಸಗುತಿದಿರಾದನು || 157 ||

**ತುಜಾವಂತು - ಮಟ್ಟೆ**
ಮಲ್ಲನಾದ್ಯೆ ಎಲಕುಮಾರ | ನಿಲ್ಲು ಬಾರೆಲಾ |
ಚಲ್ಲ ಬಡಿದೆ ನಿನ್ನ ಸತ್ವವೆಲ್ಲ ತೋರೆಲಾ ||
ಹೊಳ್ಳು ಮಾತದೇಕೆ ಸಾಕು | ಡೊಳ್ಳು ಸಾಹಸ |
ಇಲ್ಲಿ ಸಾಗದೀ ಪ್ರತಾಪ | ಕ್ಷುಲ್ಲ ರಾಕ್ಷಸ || 158 ||

ಜಲ್ಪ ಸಾಕೊ ತ್ರಿಜಗವೆಮ್ಮ | ದರ್ಪದೊಳಗಿರೆ |
ಸೊಪ್ಪು ಸೊವಡು ಗೈವೆ ನಿನ್ನ | ಅಪ್ಪನೇ ಬರೆ ||
ದರ್ಪವರಿತೆ ನಿನ್ನ ಸಹಜ | ಅಪ್ಪ ಸಹಿತಲೆ |
ಸರ್ಪ್ಪಯಾಡಿ ಕೆಡೆದುದರಿಯ | ದಿರ್ಪೆಯೇಕೆಲೆ || 159 ||

ಬಂದಿದಿರಲಿ ಬಡಿದು ನಿನ್ನ | ಹೊಂದಿದೆಲ್ಲರ |
ತಂದು ತೋರ್ಪೆ ರಣದಿ ಕೆಡೆದ | ತಂದೆ ಮುಖ್ಯರ ||
ಎಂದು ಮುಸುಗುತೆಚ್ಚನಾ ನೂ | ರೊಂದು ಬಾಣವ |
ಸ್ಕಂದನಿರದೆ ಕಡಿಯುತಿರ್ದ | ಬಂದುದೆಲ್ಲವ || 160 ||

**ಭಾಮಿನಿ**
ಕಾದಿದರು ಸಮ ಸತ್ವದಲಿ ಹಿಂ |
ದಾದ ತಾರಕ ಯುದ್ಧಕಿಮ್ಮಡಿ |
ಯಾದುದೆನೆ ವಿವಿಧಾಸ್ತ್ರಗಳ ಮುಂಕೊಳಿಸಿ ಬಹುಬಗೆಯ ||
ಸಾಧನೆಯೊಳೀಗಿವರ ಹೋಲುವ |
ಯೋಧರಿಲ್ಲೆಂಬಂತೆ ಹಳಚಲು |
ಮೋದಿ ಸೋತನು ಗುಹಕುಮಾರನು ದನುಜಗಿದಿರಾಗಿ || 161 ||

**ಮಾರವಿ - ಏಕ**
ಅರುಮೊಗನಾಗಳೆ | ಮೆರೆದೊರಗಲು ಮುಂ |
ಬರುವಾ ಭೈರವ | ರುರು ಕಾಲಾದ್ಯರ |
ಗರುವವಿಳಿಸಿ ದು | ರ್ಧರ ರಾಕ್ಷಸ ತಾ |
ಹರಗಿದಿರಾಗಿಯೆ | ಹರಿಸಿದ ರಥವಾ || ಏನನೆಂಬೆ || 162 ||

ವೀರೇಶ್ವರನಾ | ದೂರದಿ ದನುಜನ |
ಭಾರಿಯ ಕಂಡು | ಬೈರಿದನಾಕ್ಷಣ |
ಘೋರಾಕಾರವ | ತೋರುತ ಮಹಿಮೆಯ |
ಸಾರಿ ವರೂಥವ | ನೇರುತ ನಿಂದಾ || ಏನನೆಂಬೆ || 163 ||

ಬಂದಿರೆ ದನುಜ | ಮದಾಂಧರು ಸಮರಕೆ |
ನಿಂದಿರೆ ಯಮನೆಡೆ | ಗೊಂದುವಿರೇ ಚಲ |
ಚಂದವಾಯ್ತು ಸುರ | ಸಂದೋಹಕೆ ಸುಖ |
ಹೊಂದಿಸಿ ಲೋಕಾ | ನಂದಗೊಳಿಪರೆ || ಏನನೆಂಬೆ || 164 ||

**ಕಾಂಭೋದಿ - ಝಂಪೆ**
ಯಾರು ನೀಂ ಪೇಳು ಸುರ | ವೀರನೋ ಪ್ರಮಥರಲಿ |
ಶೂರನಹೆಯಾ ಕಾದಿದಪರೆ ||
ಯಾರಾದರೇಂ ದಕ್ಷ | ವೈರಿ ನಾನಭವಸುತ |
ವೀರಭದ್ರನ ಬಲ್ಲೆಯೇನೋ || 165 ||

ಹೋಗತ್ತ ಧುರದೊಳನು | ರಾಗವಿರೆ ಈ ಯುದ್ಧ |
ಯಾಗವಲ್ಲೈ ಸೆಣಸಲಹೆಯ ||
ಯಾಗವೇತಕೆ ಯುದ್ಧ| ಸಾಗರವ ದಾಟಿದಗೆ |
ಈ ಗುಲ್ಲು ಕಲಹ ಬಿಗುಹೇನೈ || 166 ||

ಸಲ್ಲದೀ ಕದನ ನೋ | ಡಲ್ಲಿ ಯಾಗವ ಮೆಟ್ಟಿ |
ಹಲ್ಲ ಕಳಚಿಸಿದ ಬಗೆಯಲ್ಲ ||
ಅಲ್ಲವೆಂದೇನು ಮುಖ | ದಲ್ಲಿ ಸರ್ವರ ಗೆಲಿದ |
ಮಲ್ಲನಿಗೆ ಕಸವೈಸೆ ನೀವು || 167 ||

ಈ ಪರಿಯ ಮಾತಿನ ಪ್ರ | ತಾಪದಿಂದೇರಿ ಶರ |
ಚಾಪಾಯುಧಗಳನೆಚ್ಚಾಡಿ ||
ತಾಪಗೊಂಡರು ಮತ್ತೆ | ಭಾಪೆಂದು ಹೊಡೆದಾಡೆ |
ಭೂಪಥದಿ ಮೈಮರೆದನಸುರ || 168 ||

**ಸೌರಾಷ್ಟ್ರ - ತ್ರಿವುಡೆ**
ಇತ್ತಲೀ ಸಂಗತಿಯ ಕೇಳ್ದಾ |
ದೈತ್ಯಬಲದೊಡಗೂಡಿ ತಾರಕ |
ಪುತ್ರನೆಂದನು ಬೆದರಿದರೆ ಸ | ರ್ವತ್ರ ಧುರಕೆ || 169 ||

ಬರಲಿ ಮೃತ್ಯುಂಜಯನೆ ಕದನಕೆ |
ಮೆರೆಸಬಲ್ಲನೆ ವಿಜಯವೆಮ್ಮಾ |
ಕರತಳದೊಳಿರೆ ಮೃತ್ಯು ಸಾಹಸ | ವರಬಲದಲಿ || 170 ||

ಸುಳಿಸುವೆನು ಕೆಡೆದವರನೀಗಳೆ |
ಬಲದಿ ಬೆಳಗಿಪೆನಾತ್ಮಶಕ್ತಿಯ |
ಚಲಿಸದಿರಿ ನೀವೆಂದು ಪರಬಲ | ವಳಿಯದನಕ || 171 ||

ಎಂದು ಬದ್ಧಭ್ರುಕುಟಿತಾಕ್ಷಿಗ |
ಳಿಂದ ನೋಡಲು ಶಿಂಶುಮಾರನು |
ಹಂದೆಹಗೆಗಳ ಹೊಯ್ಯು ಬಹೆ ನಾ | ನೆಂದು ನುಡಿದ || 172 ||

ಕೊಡಿಸು ವೀಳ್ಯವ ಸುರರ ಪ್ರಮಥರ |
ಗಡಣವನು ಸದೆದಿಕ್ಕಿ ಶೂಲಿಯ |
ಕಡುಹನಿಳಿಸುವೆನೊಮ್ಮೆಗೀ ಕೈ | ತಡೆವರುಂಟೇ || 173 ||

ಎನುತ ಮೇಲಪ್ಪಣೆಯನಾಂತಾ |
ದನುಜನೈದಿದನಸ್ತ್ರಶಸ್ತ್ರದ |
ಹೊಣೆಯನೇರಿಸಿ ಸಕಲ ರಾಕ್ಷಸ | ಗಣವ ನೆರಹಿ || 174 ||

**ಕಂದ ಪದ್ಯ**
ಕಂಡಾಕ್ಷಣ ನಂದೀಶ್ವರ |
ಕೆಂಡಂಗಳನುಗುಳಿ ರುದ್ರುನಾ ಬೆಸದಿಂದಂ ||
ಮಂಡೆಯ ನೆಗೆದಾಡುತ ಭೂ |
ಮಂಡಲವೇ ಬಿರಿಯುವಂತೆ ಬೊಬ್ಬಿರಿದೆಂದಂ || 175 ||

**ಭೈರವಿ - ಏಕ**
ನಿಲ್ಲೆಲ ದನುಜಾಧಮನೆ | ತೋ |
ರಿಲ್ಲಿ ಪರಾಕ್ರಮವನ್ನ ||
ಚೆಲ್ಲುವೆ ಕೆನ್ನೆತ್ತರನು | ಯಮ |
ನಲ್ಲಿಗೆ ತೊತ್ತಾಗಿಪೆನು || 176 ||

ಯಾರಿದು ನಂದಿಯೆ ಧುರಕೆ | ಹ |
ಮ್ಮೇರಿ ನಿಂದೆಯೆಲ ಜೋಕೆ ||
ಹೇರಾಟವ ಬಿಟ್ಟೆನ್ನ | ಕೈ |
ಹೋರಟೆ ಕೊಳ್ಳುವೆಯೇನಾ || 177 ||

ಧರ್ಮಾಂಧನೆ ನೀನೆನ್ನ | ತನು |
ಧರ್ಮವನರಿತಿಹೆಯೇನಾ ||
ಧರ್ಮದ್ರೋಹಿಗಳನ್ನು | ತೆಗೆ |
ನಿರ್ಮೂಲನಗೊಳಿಸುವೆನು || 178 ||

ನಡೆಗೊಂದೆಯೆ ಹೋಗತ್ತ | ಕೆಡೆ |
ನುಡಿಯಾಡಲು ಬಿಡೆ ಮತ್ತ ||
ಹೊಡೆದು ಬಡಿದು ಕೋಡುಗಳ | ನಿ |
ನ್ನೊಡಲ ಬಗಿವೆ ಬಿಡು ಬಾಳ || 179 ||

ಉಸುರದಿರೈ ಕೀಳ್ಮಾತ | ಮೈ |
ಯೆಸಕವ ನೋಡುವುದೆನುತ ||
ವೃಷಭೇಷನು ಕಿಡಿಯುಗುಳಿ | ಕೋ |
ಳ್ಮಸಗುತ ತಿವಿದನು ಕೆರಳಿ || 180 ||

**ಭಾಮಿನಿ**
ಒಡೆಯಲಾಗಲಜಾಂಡ ಖರ್ಪರ |
ಸಿಡಿದು ಮೈಮೇಲೆರಗಿ ಪಾದವ |
ನಿಡಲು ವಕ್ಷಕೆ ಶಿಂಶುಮಾರನು ಕೆಡೆದನವನಿಯಲಿ ||
ನಡುಗಿದುವು ತ್ರಿಪುರಂಗಳಾಯೆನೆ |
ಮಿಡುಕುವಸುರರ ಧ್ವನಿಯ ಕೇಳ್ದಾ |
ಕಡುಪರಾಕ್ರಮಿ ತಾರಕಾಕ್ಷನೆ ದುಡುಕುತಿಂತೆಂದ || 181 ||

**ಮಾರವಿ - ಏಕ**
ಏನಚ್ಚರಿಯಿದು | ದಾನವ ಕುಲದಭಿ |
ಮಾನಕೆ ಚ್ಯುತಿಯಾಯ್ತೆ ||
ಕಾಣಲು ನಮ್ಮ | ಧೀನದೊಳಿರುವರು |
ಹಾನಿಯನೊಡ್ಡಿದರೆ || 182 ||

ಘೋರಾಕಾರದ | ಶೂರ ದನುಜಬಲ |
ವಾರಿಧಿ ಬತ್ತಿದುದೇ ||
ವೀರಾದ್ಯರ ಹ | ಮ್ಮೀರಿತು ಸಹಸಾ |
ತೀರಿಸಬೇಕೀಗ || 183 ||

ನಡೆಯಿರಿ ನಾಲ್ದೆಸೆ | ಯೆಡೆಯ ಭಟರು ಸಂ |
ಗಡಿಸುತ ಪಡೆಗೂಡಿ ||
ಕೆಡಹಿರಿ ಹಗೆಗಳ | ಗಡಣವನೆಂದು |
ಗ್ಗಡಿಸುತ ಹೊರವಂಟ || 184 ||

ಸ್ಮರಹರನಿತ್ತಲು | ಬರುವಸುರರ ಕಂ |
ಡುರಿದೆದ್ದನು ಭರದಿ ||
ಮುರಹರನನು ತಾ | ಪರಿಕಿಸಿ ಬ್ರಹ್ಮನ |
ಕರೆದೆಚ್ಚರಿಸಿದನು || 185 ||

ಉರಿಗೆದರುತ ಕಣ್ | ಕೆರಳಿಸಿ ಕರದಲಿ |
ಶರಚಾಪವ ಕೊಂಡು ||
ಧರೆಯದುರಲು ಹೂಂ | ಕರಿಸಿದನಸುರರ |
ನೆರವಿಯು ಹಿಂದೆಗೆಯೆ || 186 ||

ಕ್ರೂರ ದನುಜರೇಂ | ತೋರುವಿರೇ ಛಲ |
ಬಾರದು ಜಯ ನಿಮಗೆ ||
ಭೋರನೆ ಹಿಂದಕೆ ಜಾರಿರಿ ಎನಲಾ |
ತಾರಕಸುತನೆಂದ || 187 ||

**ಕೇದಾರಗೌಳ - ಝಂಪೆ**
ಹರಹರಾ ಇದು ಚೋದ್ಯವು | ನಮ್ಮೊಡನೆ |
ಧುರಕೆ ನೀವ್ ಬಂದ ಬರವು ||
ಸರುವೇಶನಾಗಿ ಜಗಕೆ | ಸುರಪಕ್ಷ |
ವರೆಸಿ ನಡೆತಹುದೆ ಹೀಗೆ || 188 ||

ನೀತಿ ನ್ಯಾಯವ ಶೋಧಿಸೆ | ನಿಷ್ಪಕ್ಷ |
ಪಾತವೇ ನಮ್ಮದೈಸೆ ||
ಪಾತಕಿಗಳಾಗೆ ನೀವು | ಬಲ ಸಹಿತ |
ವೈತಂದೆವಿಲ್ಲಗಾವು || 189 ||

ಹಿರೆ ಭಾಗದೊಡೆತನವನು | ತ್ರಿದಶರಿಗೆ |
ಕರೆದಿತ್ತ ನ್ಯಾಯವೇನು ||
ಮರಣವಿರದಂತೆ ಗೈದು | ನಮ್ಮವರ |
ತರಿಯುವಿರೆ ದ್ರೋಹ ಬಗೆದು || 190 ||

ಪಾಪಕೃತ್ಯವೆ ಖಳರಿಗೆ | ಮೃತ್ಯುವಿನ |
ರೂಪಾಗಿ ಬಹುದು ಹೀಗೆ ||
ಆಪತ್ತಿನಲಿ ಮರುಗುತ | ಸೊಕ್ಕು ಬರೆ |
ಕಾಪಥದಿ ಸಾಯ್ವರತ್ತ || 191 ||

ಎನಿತು ನ್ಯಾಯವ ನುಡಿದರು | ಉದ್ದುರುಟು |
ತನವಿರಲು ಕೇಳ್ವರಾರು ||
ಕಣೆಯೌಷಧಿಯೆ ತಾಗಲು | ತಿಳಿವುದೆಂ |
ದಣೆದನಾ ಕಣೆಯ ಸಾಲು || 192 ||

**ಭೈರವಿ - ಏಕ**
ಹರನೊಮ್ಮೆಗೆ ಹೂಂಕರಿಸಿ | ಮುಂ |
ಬರುವಸ್ತ್ರವ ಕತ್ತರಿಸಿ ||
ಭರದಿಂ ಪ್ರತಿಬಾಣಗಳ | ಮಳೆ |
ಗರೆದನು ಭಸಿತೋದ್ಧೂಳ || 193 ||

ಪ್ರತಿಶರ ಕ್ಷತಿಯಿಂ ಕಡಿದು | ಬಲು |
ಖತಿಯಿಂ ಜೇವೊಡೆಗೈದು ||
ಜತನದೊಳೆಚ್ಚನು ಖೂಳ | ಮಾ |
ರುತ ಶಿಖಿ ಮುಖ್ಯಾಸ್ತ್ರಗಳ || 194 ||

ಮಾರಾಂತಕನುರಿದೆದ್ದು | ಸಂ |
ಹಾರ ರುದ್ರನೆನೆ ಮುಳಿದು ||
ಘೋರತರಾಸ್ತ್ರವ ಕೈಗೆ | ತೆಗೆ |
ದೇರಿಸಿ ಬಿಟ್ಟನು ಖಳಗೆ || 195 ||

ಬರಿದಾಗಲು ಬಾಣಗಳು | ಮು |
ಮ್ಮುರಿದೊರ್ಗಲು ಕೈದುಗಳು ||
ಪರಿಪರಿ ಮಲ್ಲ ಕ್ರಮದಿ | ಮೈ |
ಮರೆಸಿದರತಿ ಸಾಹಸದಿ || 196 ||

**ವಾರ್ಧಕ**
ಇತ್ತಲವರೀರ್ವರೀ ತೆರದೊಳೆಚ್ಚಾಡುತಿರ |
ಲತ್ತಲಾ ಕಣದೊಳಗೆ ಮಡಿದು ಬಿದ್ದಸುರಕುಲ |
ಮೃತ್ಯುಮುಖದಿಂ ಹೊರಟು ಬರುವಂತೆ ಸರಸಿಯೊಂದರೊಳೆದ್ದು ಬರುತಿರಲ್ಕೆ ||
ಕತ್ತಲೆಯು ಕವಿಯಿತಾಕಾಶ ಭುವನತ್ರಯಂ |
ಮುತ್ತಿದ ಮಹಾ ಭಯದೊಳಮರಗಣವಳಲುತಿರೆ |
ಗೊತ್ತುಗುರಿಯರಿಯದೀ ವೈಚಿತ್ರ್ಯವೇನೆಂದು ಕೇಳ್ದನಚ್ಯುತನು ವಿಧಿಯ || 197 ||

**ಕೇದಾರಗೌಳ - ಅಷ್ಟ**
ವನಜಪೀಠನೆ ಕೇಳಾ | ದನುಜರೇಂ ಮಾಯಕ |
ವನು ಬಲ್ಲರಯ್ಯ ಪೇಳು ||
ಹನನವಾದರು ಮೃತ್ಯು | ವನು ಗೆದ್ದು ಬಂದಿಲ್ಲಿ |
ಹೆಣಗುವುದಾಶ್ಚರ್ಯವು || 198 ||

ತಿಳಿದೆಂದನಾ ಬೊಮ್ಮ | ಅಳಿದವರನು ಜೀವ |
ಗೊಳಿಸುವ ಕೊಳವಲ್ಲಿದೆ ||
ಖಳತಾರಕನ ಮೊಮ್ಮ | ಬಲವಾದ ವರದಿಂದಾ |
ಕೊಳವ ಕಾದಿರುತಿಹನು || 199 ||

ಅಂತಾದರೀ ಮಾಯ | ಮಂತ್ರವಾದಿಗಳ ನಾ |
ವೆಂತು ಸಂಹರಿಸುವುದೈ ||
ತಂತ್ರವಾವುದೊ ಎನ | ಲಿಂತು ಪೇಳ್ದನು ಬ್ರಹ್ಮ |
ಅಂತರಂಗದಿ ಹರಿಗೆ || 200 ||

ತಳುವದೆ ಗೋವತ್ಸ | ಗಳ ಹಾಗೆ ನಾವಿರ್ವ |
ರಿಳಿದು ಅಮೃತ ಕೂಪವ ||
ಜಲವ ಬತ್ತಿಸಿದರೀ | ಗಳೆ ಸರ್ವ ರಾಕ್ಷಸ |
ರಳಿದು ಹೋದರು ನಿಶ್ಚಯ || 201 ||

ಎಂದವರಿರ್ವರು | ಬಂದು ಹೊಕ್ಕರು ಗೋಪ್ಯ |
ದಿಂದಲಾ ರಸಬಾವಿಯ ||
ನಂದೀಶನತಿಚಾರ | ದಿಂದ ದಾನವರ ಸ್ತ್ರೀ |
ವೃಂದ ಹಾಯೆನುತಿರಲು || 202 ||

**ಸೌರಾಷ್ಟ್ರ - ತ್ರಿವುಡೆ**
ತ್ರಿಪುರದೊಳಗಿರುವಮೃತಕೂಪವು |
ವಿಫಲವಾಗಲು ರಕ್ಕಸರ ಪಡೆ |
ಯಪದೆಸೆಯೊಳೈದಿತ್ತು ಕಾಲನ | ಜಪಿಸುತೊಡನೆ || 203 ||

ಸಾಲುಸಂದಣಿಗೊಂಡು ಕೆಡೆದಾ |
ಖೂಳ ದನುಜರ ನೋಡಿ ತ್ರಿಪುರರು |
ಬಾಳನೇತ್ರನ ಮುತ್ತಿದರು ಕ | ಟ್ಟಾಳುತನದಿ || 204 ||

ಮರುಳು ದೇವನೆ ನಿಲ್ಲು ದನುಜರಿ |
ಗೆರಡೆಣಿಸಿದಾ ಬಿರುಸು ಮೋಸವ |
ಮುರಿವೆನೀಕ್ಷಣವೆನುತ ಹಾಯ್ದರು | ಸರಭಸದಲಿ|| 205 ||

ಹರನದಾಗಳೆ ರೌದ್ರರೂಪವ |
ಧರಿಸಿ ನಿಂದನು ಮೇರುಚಾಪವ |
ನಿರದೆ ಝೇಂಕರಿಸಿದನು ಖಳರೆದೆ | ಬಿರಿಯುವಂತೆ || 206 ||

ವೀರನಾರಾಯಣನ ಬಾಣದೊ |
ಳೇರಿಸುತ ನಿಜ ಪಾಶುಪತಶರ |
ಹೇರಿ ಭರದಿಂದೆಚ್ಚನಾ ಹೂಂ | ಕಾರದಿಂದ || 207 ||

ಮೂರುಜಗವಲ್ಲಾಡಿತೊಂದೇ |
ಬಾರಿಯೊಳು ತ್ರಿಪುರಂಗಳುರಿಯಲು |
ಧಾರಿಣಿಯೊಳೊರಗಿದರು ರಾಕ್ಷಸ | ರಾರುಭಟಿಸಿ || 208 ||

ಸುರರು ಜಯ ಜಯವೆನುತ ಹೂಮಳೆ |
ಗರೆಯೆ ದುಂದುಭಿ ಘೋಷದಲಿ ವಿ |
ಸ್ತರಿಸಿತಾಗಳೆ ತ್ರಿಪುರ  ಮಥನದ | ಚರಿತೆಯಿಳೆಗೆ || 209 ||

**ವಾರ್ಧಕ**
ಹರುಷದಿಂ ಬಳಿಕ ಹರಿಯಜಮುಖ್ಯ ನಿರ್ಜರರು |
ಹರನ ಬಿರುದಾವಳಿಯ ಕೊಂಡಾಡಿ ನಮಿಸಲ್ಕೆ |
ಕರುಣಾಕಟಾಕ್ಷದಿಂ ನೋಡಿ ಮನ್ನಿಸುತಲವರವರ ಲೋಕಕೆ ಕಳುಹಿಸಿ ||
ಹರಗಣಂಗಳ ಕೂಡಿ ರಜತಾಚಲಕ್ಕೈದಿ |
ಗಿರಿಜೆಯೊಡಗೂಡಿ ನಾನಾ ವಿನೋದಂಗಳಲಿ |
ನೆರೆದು ಸುಖದಿಂದಿರ್ದನೀ ಮಹಾ ಬ್ರಹ್ಮಾಂಡವಂ ಪಾಲಿಸುತ್ತ ಶಿವನು || 210 ||

**ಭಾಮಿನಿ**
ಇನಿತು ಮೆರೆದಾ ತ್ರಿಪುರ  ದಹನದ |
ವಿನುತ ಕಥೆಯನು ಯಕ್ಷಗಾನದೊ |
ಳೆನುವುದೆನೆ ಬುಧ ವಿಷ್ಣು ಶರ್ಮನು ಪೇಳ್ದನೀ ಕ್ರಮದಿ ||
ಗುಣವದಾವುದೊ ಕೃತಿಯ ಚರಿತೆಯ |
ಘನವು ತ್ರಿಗುಣಾತ್ಮಕವು ಪುಣ್ಯದ |
ಕಣಿಯಹುದು ಬಿಡದೋದಿದರಿಗಿತ್ತಪನು ಶಿವ ಸುಖವ || 211 ||

**ಮಂಗಲ ಪದ**
ಮಂಗಲಂ ಜಯ ಮಂಗಲಂ ||ಪಲ್ಲ||
ನಂದಿವಾಹನ  | ಇಂದುಧರ ಸಾ |
ನಂದಗೆ | ಗುಣ | ವೃಂದಗೆ ||
ಸ್ಕಂದನಯ್ಯಗೆ | ಸಾಂದ್ರ ಕರುಣಾ |
ಸಿಂಧುಗೆ ಮುನಿ | ವಂದ್ಯಗೆ || 212 ||

ಮಾರಮಥನಗೆ | ಘೋರ ರೌದ್ರಾ |
ಕಾರಗೆ | ಓಂ | ಕಾರಗೆ ||
ಸಾರ ಧರ್ಮೋ | ದ್ಧಾರ ಶರಧಿಗೆ |
ಭೀರಗೆ  | ಭವ | ದೂರಗೆ || 213 ||

ಕಾಲಕಂಧರ | ಕಾಲನೇತ್ರ ನಿ |
ರಾಳಗೆ ಜಿತ | ಕಾಲಗೆ ||
ಸ್ಥೂಲ ಗಾತ್ರ ವಿ | ಶಾಲ ಭಸ್ಮೋ |
ದ್ದೂಳಗೆ | ತ್ರಿ | ಶೂಲಿಗೆ || 214 ||

ದಕ್ಷಹರ ಭಾ | ಳಾಕ್ಷ ಭುವನಾ|
ಧ್ಯಕ್ಷಗೆ | ಸುರ | ಪಕ್ಷಗೆ ||
ಮೋಕ್ಷದಾತಗೆ | ರಾಕ್ಷಸಕುಲ |
ಶಿಕ್ಷಗೆ | ಶ್ರುತಿ | ರಕ್ಷಗೆ || 215 ||

ದೋಷನಾಶ ಗಿ | ರೀಶ ಭೂತಾ|
ಧೀಶಗೆ | ಫಣಿ | ಭೂಷಗೆ ||
ಲೇಸಗೆಯ್ದು | ಮ್ಮಾಶೆ ನಡೆಸುವ |
ಈಶಗೆ | ಕುಂ | ದೇಶಗೆ || 216 ||

**(ಕಂದ ಪದ್ಯ**
ಬರೆದಿನಿದಂ ಶಿವನೊಲವಿಂ |
ದೊರೆದಂದದೊಳಿಂದು ಕೃಷ್ಣವಿಜಯಂ ತುಲಸೀ ||
ಪರಿಣಯ ದ್ಯೂತದ ಕಥೆ ರಘು |
ವರನಾಪುರಗಮನ ಕರ್ಣಭೀಮರ ಕಥನಂ || 217 ||)

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಕುಂದಾಪುರ ಪ್ರೆಸ್

**ಪ್ರಸಂಗ ಪ್ರತಿ ಆಧಾರ:** ಕುಂದಾಪುರ ಪ್ರೆಸ್ ಇವರು ಪ್ರಕಟಿಸಿದ ತ್ರಿಪುರ ಮಥನ ಯಕ್ಷಗಾನ ಪುಸ್ತಕ

**ಪ್ರಸಂಗ ಪ್ರತಿ ಕೊಟ್ಟವರು:** ರಘುರಾಮ್ ಮುಳಿಯ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀಕೃಷ್ಣ ಭಟ್ ಸುಣ್ಣಂಗುಳಿ

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ್ ಡಿ.ಎಸ್., ಗಿಂಡಿಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ